## ಅಧ್ಯಾಯ 8

# ಏಳನೆಯ ಮುದ್ರೆ ಮತ್ತು ಮೊದಲ ನಾಲ್ಕು ತುತೂರಿಗಳು

6ನೇ ಅಧ್ಯಾಯದಲ್ಲಿ, ಆರು ಮುದ್ರೆಗಳು ತ್ವರಿತ ಗತಿಯಲ್ಲಿ ಒಡೆಯಲ್ಪಟ್ಟವು. ಬಳಿಕ ದರ್ಶನವು ಬೇರೆ ದಾರಿಯನ್ನು ಹಿಡಿಯಿತು, ಅಲ್ಲಿ ದೇವರ ಜನರಿಗೆ ಮುದ್ರೆ ಒತ್ತಲ್ಪಡುತ್ತಿತ್ತು ಮತ್ತು ಅವರು ಪರಲೋಕದಲ್ಲಿ ಸಿಂಹಾಸನದ ಮುಂದೆ ಸಂಭ್ರಮಿಸುತ್ತಿದ್ದರು. 8ನೇ ಅಧ್ಯಾಯವು ಮೂಲ ಕಥೆಗೆ ಹಿಂದಿರುಗಿ ಏಳನೆಯ ಮುದ್ರೆಯು ಒಡೆಯಲ್ಪಡುವದಕ್ಕೆ ಸಾಕ್ಷಿಯಾಗುತ್ತದೆ.

ಅಧ್ಯಾಯವು ಏಳನೆಯ ಮುದ್ರೆಯು ಒಡೆಯಲ್ಪಡುವದರೊಂದಿಗೆ ಆರಂಭಗೊಳ್ಳುತ್ತದೆ, ಅದು ಏಳು ತುತೂರಿಗಳು ಊದಲ್ಪಡುವದರೆಡೆಗೆ ನಡಿಸುತ್ತದೆ. ಅನಂತರ ಪ್ರಕಟನೆ ಪುಸ್ತಕದಲ್ಲಿ, ಏಳನೆಯ ತುತೂರಿಯು ಊದಲ್ಪಡುವದು ಕೋಪದ ಏಳು ಪಾತ್ರೆಗಳು ಸುರಿಸಲ್ಪಡುವದಕ್ಕೆ ವೇದಿಕೆಯನ್ನು ಸಿದ್ಧಗೊಳಿಸುತ್ತದೆ (ಅಧ್ಯಾಯಗಳು 15; 16).

ಏಳನೆಯ ಮುದ್ರೆಯ ಬಳಿಕ ತುತೂರಿಗಳು ಊದಲ್ಪಡುವದು ಮಾತ್ರವೇ ಆಗಿರುವದಿಲ್ಲ; ಅವುಗಳು ಏಳನೆಯ ಮುದ್ರೆಯಿಂದಾಗುವ ಪ್ರಾಥಮಿಕ ಕ್ರಿಯೆ ಎಂಬುದಾಗಿ ಯೋಚಿಸಬಹುದಾಗಿದೆ. ಕೆಲವು ವ್ಯಾಖ್ಯಾನಕಾರರು ಏಳನೆಯ ಮುದ್ರೆಯ ಕ್ರಿಯೆಯು 1ನೇ ವಚನದಲ್ಲಿ ಪೂರ್ತಿಗೊಳ್ಳುತ್ತದೆಂದು, ಮತ್ತು ಮುದ್ರೆಯು ಒಡೆಯಲ್ಪಟ್ಟಾಗ ಕೇವಲ ಮೌನವು ಮಾತ್ರವೇ ಸಂಭವಿಸುತ್ತದೆಂದು ವಾದಿಸುತ್ತಾರೆ. ಈ ವ್ಯಾಖ್ಯಾನವು ಸಾಧ್ಯವಿರುತ್ತದೆ, ಆದರೆ ಏಳನೆಯ ಮುದ್ರೆಯಲ್ಲಿನ ಕ್ರಿಯೆಯು ಮುಂದುವರೆಯುವದಾಗಿದೆ ಎಂಬುದನ್ನು ಸನ್ನಿವೇಶವು ಬೆಂಬಲಿಸುವದಾಗಿದೆ. 5ನೇ ವಚನದಲ್ಲಿನ ಹವಾಮಾನ ಭಾಷೆಯು ಏಳನೆಯ ತುತೂರಿಯು ಓದಲ್ಪಡುವಿಕೆಯ (11:19) ಮತ್ತು ಏಳನೆಯ ಪಾತ್ರೆಯು ಸುರಿಸಲ್ಪಡುವ ಪರಾಕಾಷ್ಠೆಗೆ ಸಮನಾರ್ಥವುಳ್ಳದ್ದಾಗಿದೆ (16:18–21). ಈ ಸಮಾನತೆಗಳು ಏಳನೆಯ ಮುದ್ರೆಯ ಕ್ರಿಯೆಯು ಕನಿಷ್ಠ 5ನೇ ವಚನದ ವರೆಗೂ ವಿಸ್ತರಿಸಲ್ಪಡುತ್ತದೆ ಎಂಬುದನ್ನು ಸೂಚಿಸುತ್ತದೆ - ಅದರಲ್ಲಿ 2ನೇ ವಚನವು ಸೇರಿರುತ್ತದೆ, ಅದು ದೇವದೂತರಿಗೆ ಏಳು ತುತೂರಿಗಳು ಕೊಡಲ್ಪಡುವ ಕುರಿತಾಗಿದೆ.

Frank Packನು ಅಭಿಪ್ರಾಯ ಪಡುವದೇನೆಂದರೆ "ಏಳು ತುತೂರಿಗಳ ಇಡೀ ಗುಂಪು ಏಳನೆಯ ಮುದ್ರೆಯಲ್ಲಿನ ಸಂಗತಿಗಳನ್ನು ಒಳಗೊಂಡಿರುತ್ತದೆ."[1] Jim McGuigganನು ವಾದಿಸಿದ್ದೇನೆಂದರೆ, "ಏಳನೆಯ ಮುದ್ರೆಯು ಏಳು ತುತೂರಿಗಳನ್ನು ಒಳಗೊಂಡಿದೆ, ಮತ್ತು ಏಳನೆಯ ತುತೂರಿಗಳು ಏಳು ಪಾತ್ರೆಗಳನ್ನು ಒಳಗೊಂಡಿರುತ್ತದೆ." ಆತನು ಈ ಮೂಲಭೂತ ಸಂಕ್ಷಿಪ್ತ ವಿವರಣೆಯನ್ನು ಮುಂದಿಡುತ್ತಾನೆ:[2]

I. ಮುದ್ರೆ ಒಂದು
II. ಮುದ್ರೆ ಎರಡು
III. ಮುದ್ರೆ ಮೂರು
IV. ಮುದ್ರೆ ನಾಲ್ಕು
V. ಮುದ್ರೆ ಐದು
VI. ಮುದ್ರೆ ಆರು
VII. ಮುದ್ರೆ ಏಳು
    A. ತುತೂರಿ ಒಂದು
    B. ತುತೂರಿ ಎರಡು
    C. ತುತೂರಿ ಮೂರು
    D. ತುತೂರಿ ನಾಲ್ಕು
    E. ತುತೂರಿ ಐದು
    F. ತುತೂರಿ ಆರು
    G. ತುತೂರಿ ಏಳು
        1. ಪಾತ್ರೆ ಒಂದು
        2. ಪಾತ್ರೆ ಎರಡು
        3. ಪಾತ್ರೆ ಮೂರು
        4. ಪಾತ್ರೆ ನಾಲ್ಕು
        5. ಪಾತ್ರೆ ಐದು
        6. ಪಾತ್ರೆ ಆರು
        7. ಪಾತ್ರೆ ಏಳು

ಏಳು ಮುದ್ರೆಗಳು, ಏಳು ತುತೂರಿಗಳು, ಮತ್ತು ಏಳು ಪಾತ್ರೆಗಳ ನಡುವೆ ಅನೇಕ ಗಮನ ಸೆಳೆಯುವಂಥ ಸಮಾನಾರ್ಥಗಳು ಕಂಡು ಬರುತ್ತವೆ. ಪ್ರತಿಯೊಂದು ಗುಂಪುಗಳನ್ನು ನಾಲ್ಕು ಹಾಗೂ ಮೂರು ಅಂಕೆಗಳಿಂದ ಕೂಡಿರುತ್ತವೆ; ಪ್ರತಿಯೊಂದು ಸರಣಿಯಲ್ಲಿ, ಮೊದಲಿನ ನಾಲ್ಕು ಸೂಚನೆಗಳು ನಿಕಟವಾಗಿ ಸಂಬಂಧ ಹೊಂದಿರುತ್ತವೆ ಮತ್ತು ಕಡೇ ಮೂರು ಸೂಚನೆಗಳು ಬೇರೆ ಬೇರೆ ಆಗಿರುತ್ತವೆ. "ಎಲ್ಲಾ ಮೂರು ಕಥನಗಳು ತಿರುಳಾತ್ಮಕವಾಗಿ ಒಂದೇ ನೆಲವನ್ನು ಆವರಿಸಿಕೊಂಡಿರುತ್ತವೆ, ಅನೇಕ ಸಾರಿ ಏಕ ಹೋಲುವಂತಹ ಮಾಹಿತಿಯನ್ನು, ಮತ್ತು ಕೆಲವು ಸಾರಿ ತದ್ರೂಪವಾದ ಮಾಹಿತಿಯನ್ನು ಒಳಗೊಂಡಿರುತ್ತವೆ."[3] ಅಷ್ಟುಮಾತ್ರವಲ್ಲದೆ, ಎಲ್ಲವೂ ದೇವರ ಶಕ್ತಿಯನ್ನು ಕುರಿತು ಒತ್ತಿ ಹೇಳುವ ಒಂದೇ ರೀತಿಯ ಪದಗಳನ್ನು ಹೊಂದಿರುತ್ತವೆ (8:5; 11:19; 16:18-21).

ಈ ಹೋಲಿಕೆಗಳಿರುತ್ತವೆಂದ ಮಾತ್ರಕ್ಕೆ ಮೂರು ವಿಭಾಗಗಳು ಪ್ರತಿಯೊಂದು ವಿಷಯದಲ್ಲಿಯೂ ತದ್ರೂಪವಾಗಿವೆ ಮತ್ತು ಆ ಕಾರಣದಿಂದ ಶಬ್ದಾಧಿಕ್ಯವಾಗಿರುತ್ತವೆ ಎಂದರ್ಥವಲ್ಲ. "ಇವುಗಳಲ್ಲಿ ಪ್ರತಿಯೊಂದು ಸರಣಿಯು . . . ತನ್ನದೇ ಆಗಿರುವ ವೈಯಕ್ತಿಕವಾದ ಪ್ರಧಾನ ಚರ್ಚೆಯಾಂಶವನ್ನು ಹೊಂದಿರುತ್ತದೆ"[4] ಮತ್ತು ಒತ್ತನ್ನು ಹೊಂದಿದೆ. ವಿಭಾಗಗಳು ತಾರ್ಕಿಕವಾಗಿ ಪ್ರಗತಿ ಹೊಂದುತ್ತಾ ಸಾಗುತ್ತವೆ. ಅವುಗಳ ಪ್ರಗತಿಯನ್ನು ಈ ವಿಧದಲ್ಲಿ ವ್ಯಕ್ತಪಡಿಸಬಹುದಾಗಿದೆ:

1. ಮುದ್ರೆಗಳು ಒಡೆಯಲ್ಪಡುತ್ತವೆ: ಪ್ರಕಟನೆ.
2. ತುತೂರಿಗಳು ಊದಲ್ಪಡುತ್ತವೆ: ಎಚ್ಚರಿಕೆ.
3. ಕೋಪದ ಪಾತ್ರೆಗಳು ಸುರಿಸಲ್ಪಡುತ್ತವೆ: ದಂಡನೆ.

ಪ್ರತಿಯೊಂದು ಸರಣಿಯ ಮೂಲಭೂತ ಸಂದೇಶವು ಏಕ ರೀತಿಯಾಗಿಯೇ ಇರುತ್ತದೆ: ದೇವರು ಅಧಿಕಾರದಲ್ಲಿದ್ದಾನೆ, ಮತ್ತು ಆತನು ಸಮಸ್ತವನ್ನು ಸರಿಪಡಿಸುವವನಾಗಿದ್ದಾನೆ.

## ಏಳನೆಯ ಮುದ್ರೆಯು ಒಡೆಯಲ್ಪಡುತ್ತದೆ (8:1, 2)

**[1]ಆತನು ಏಳನೆಯ ಮುದ್ರೆಯನ್ನು ಒಡೆದಾಗ ಸುಮಾರು ಅರ್ಧಗಂಟೇ ಹೊತ್ತಿನ ವರೆಗೂ ಪರಲೋಕವು ನಿಶ್ಯಬ್ದವಾಯಿತು. [2]ಆಗ ದೇವರ ಸನ್ನಿಧಿಯಲ್ಲಿ ನಿಂತಿರುವ ಏಳು ಮಂದಿ ದೇವದೂತರನ್ನು ಕಂಡೆನು; ಅವರಿಗೆ ಏಳು ತುತೂರಿಗಳು ಕೊಡಲ್ಪಟ್ಟವು.**

**ವಚನ 1.** ವಾಕ್ಯಭಾಗವು ಏಳನೆಯ ಮುದ್ರೆಯು ಒಡೆಯಲ್ಪಡುವದರೊಂದಿಗೆ ಆರಂಭಗೊಳ್ಳುತ್ತದೆ: **ಆತನು ಏಳನೆಯ ಮುದ್ರೆಯನ್ನು ಒಡೆದಾಗ ಸುಮಾರು ಅರ್ಧಗಂಟೇ ಹೊತ್ತಿನ ವರೆಗೂ ಪರಲೋಕವು ನಿಶ್ಯಬ್ದವಾಯಿತು**.

ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಸಂಭವಿಸುವ ರೀತಿಯಲ್ಲಿಯೇ, ನಿರೂಪಣೆಯು ವಾಚಕನಿಗೆ ಅನಿರೀಕ್ಷಿತವಾಗಿ ಎದುರಾಗುವದಾಗಿದೆ. ಯೋಹಾನನು ಪರಲೋಕದಲ್ಲಿರುವ ಸಿಂಹಾಸನದ ಕೋಣೆಯನ್ನು ಪ್ರವೇಶಿಸಿದ ಸಮಯದಿಂದಲೂ (4:1, 2), ವಾಚಕನಿಗೆ ಶಬ್ದಗಳ ಮೇಲೆ ಶಬ್ದಗಳು ಕೇಳಿಸುತ್ತಲೇ ಇರುತ್ತವೆ. 4 ಮತ್ತು 5 ಅಧ್ಯಾಯಗಳು ಪರಲೋಕದ ಹಾಡುಗಳನ್ನೊಳಗೊಂಡಿದ್ದವು. 6ನೇ ಅಧ್ಯಾಯದಲ್ಲಿ ಗುಡುಗುವ ಗೊರಸಿನ ಶಬ್ದಗಳು, ರಕ್ತಸಾಕ್ಷಿಗಳ ಕೂಗಾಟಗಳು, ಮತ್ತು ಛಿದ್ರಗೊಂಡು ಹಾರಾಡುತ್ತಿದ್ದ ವಿಶ್ವದ ಅಪ್ಪಳಿಸುವಿಕೆ ಶಬ್ದಗಳು ಇದ್ದವು. 7ನೇ ಅಧ್ಯಾಯವು ಇದುವರೆಗೂ ಒಟ್ಟಾಗಿ ಕೂಡಿ ಬಂದದ್ದರಲ್ಲಿಯೇ ಅತ್ಯಂಥ ಮಹಾ ಮೇಳವು ಏರುಧ್ವನಿಯಲ್ಲಿ ಸ್ತುತಿಗೀತೆ ಹಾಡುವ ಮೂಲಕ ಅಂತ್ಯಗೊಳ್ಳುತ್ತದೆ. ಆ ಅಧ್ಯಾಯಗಳಲ್ಲಿ, ಹೆಚ್ಚುಕಡಿಮೆ ಎಲ್ಲವೂ ಹೇಳಲ್ಪಟ್ಟಿತು ಅಥವ "ಒಂದು *ಮಹಾ* ಶಬ್ದ" ದಲ್ಲಿ ಹಾಡಲ್ಪಟ್ಟಿತು (5:2, 12; 6:10; 7:2, 10; ಒತ್ತಿ ಹೇಳಿದ್ದು ನನ್ನದು).

ಹೇಗೂ, ಏಕಾಏಕಿಯಾಗಿ, ಅಲ್ಲಿ **ನಿಶ್ಯಬ್ದವಾಯಿತು** - ಒಟ್ಟಾರೆ ಮತ್ತು ಸಂಪೂರ್ಣವಾಗಿ ಮೌನವಾಗಿತ್ತು. 7ನೇ ಅಧ್ಯಾಯವು ಎಣಿಸಲಾಗದ ಮಹಾ ಸಮೂಹದವರು ಮಾಡುವ ಆರಾಧನೆಯು "ಹಗಲಿರುಳು" (7:15) ಮುಂದುವರೆದಿತ್ತೆಂದು ಹೇಳಿತು - ಅಂದರೆ ಎಡೆಬಿಡದೆ ಸಾಗಿತ್ತು. ಹೀಗೆ ಈ ವಿಷಯವು ಸಹ ಈ ನಿಶ್ಯಬ್ದವನ್ನು ಮತ್ತಷ್ಟು ಆಘಾತಕರಗೊಳಿಸಿರಬಹುದಾಗಿದೆ. ನಿಶ್ಯಬ್ದವು **ಸುಮಾರು ಅರ್ಧಗಂಟೇ ಹೊತ್ತಿನ ವರೆಗೂ ಇತ್ತು**. ಅರ್ಧ ಗಂಟೆಯು ಅಷ್ಟೇನೂ - ಒಬ್ಬನು ಏನಾದರೂ ಸಂಭವಿಸುವದನ್ನು ಕಾಯುತ್ತಾ ಇರುವ ಹೊರತು - ದೀರ್ಘ ಕಾಲವಾಗಿರುವದಿಲ್ಲ. ಯೋಹಾನನು ಮುಂದೆ ಏನು ನಡೆಯುವದೋ ಎಂದು ನೋಡುವದಕ್ಕೆ ಕಾಯುತ್ತಿರಲು, ಪರಲೋಕದಲ್ಲಿನ ಆ ಮೂವತ್ತು ಸೆಕೆಂಡುಗಳು ಒಂದು ನಿತ್ಯತ್ವದ ಕಾಲದಂತೆ ಕಂಡಿರಬಹುದಾಗಿದೆ. ಯೋಹಾನನು "*ಸುಮಾರು* ಅರ್ಧಗಂಟೇ" ಎಂದು ಹೇಳಿದ್ದನ್ನು ನೋಡುವದಾದರೆ ಆ ಪದದಲ್ಲಿ ಅಂತಹ ಯಾವದೇ "ಆಳವಾದ" ಸಾಂಕೇತಿಕ ಅರ್ಥವು ಕಾಣಿಸುವದಿಲ್ಲ. ಈ ಪದಗುಚ್ಛವು ನಾಟಕೀಯ ಪ್ರಭಾವವನ್ನುಂಟು ಮಾಡುವದಕ್ಕೆ ಕೇವಲ ಒಂದು ಕ್ಲುಪ್ತ, ಅನಿರ್ದಿಷ್ಟವಾದ ನಿಶ್ಯಬ್ದದ

ಕಾಲಾವಧಿ ಆಗಿತ್ತಷ್ಟೆ.

ಹಾಗಿದ್ದರೂ, ವ್ಯಾಖ್ಯಾನಕಾರರು ಆಗಲೂ "ಸುಮಾರು ಅರ್ಧ ಗಂಟೇ" ಎಂಬ ಪದಗುಚ್ಛದ ಸಾಂಕೇತಿಕ ಮಹತ್ವಪೂರ್ಣತೆಯ ಕುರಿತು ಹೋರಾಟವನ್ನು ಅನುಭವಿಸುತ್ತಾರೆ. ಅವರು "ಇದರ *ಅರ್ಥವು* ಏನಾಗಿರುವದು?" ಎಂದು ಒದ್ದಾಡುತ್ತಾರೆ. ಒಂದು ಉತ್ತಮ ಪ್ರಶ್ನೆಯೆಂದರೆ "ಇದು ಕಥಾ ನಿರೂಪಣೆಯಲ್ಲಿ ಯಾವ ಉದ್ದೇಶವನ್ನು ಹೊಂದಿರುವದು?" ಎಂದಾಗಿರುತ್ತದೆ. ಸಂಗೀತ ಗಾನಗಳಲ್ಲಿ "ವಿರಾಮಕಾಲಗಳು" ಎಂಬ ಸಂಕೇತಗಳಿರುತ್ತವೆ. ಒಬ್ಬ ಗಾಯಕನು ಅಥವಾ ವಾದ್ಯ ನುಡಿಸುವವನು ವಿರಾಮಕಾಲಕ್ಕೆ ಬರುವಾಗ, ಆತನು ಸ್ವಲ್ಪ ಹೊತ್ತು ವಿರಾಮಕಾಲವು ಸೂಚಿತವಾಗಿರುವ ತನಕ ಸುಮ್ಮನೆ ಇರುವನು; ಆತನು ಆ ಕಾಲಾವಧಿಯ ತನಕ ನಿಶ್ಯಬ್ದದಿಂದಿರುತ್ತಾನೆ. ಆಗ ಜನರು, ಈ ಗಾಯನದಲ್ಲಿ ನಿಶ್ಯಬ್ದದ *ಅರ್ಥವೇನು"* ಎಂಬುದಾಗಿ ಕೇಳುವದಿಲ್ಲ. ನಿಶ್ಯಬ್ದವು ಏನೋ ಒಂದು ಕಾರ್ಯವನ್ನು ಮಾಡುವದಕ್ಕೆ ಇರುತ್ತದೆ ಎಂದು ಅವರು ಅರ್ಥಮಾಡಿಕೊಳ್ಳುವರು: ಗಾಯನಕ್ಕೆ ಒಂದು ಒಟ್ಟಾರೆಯಾದ ಪರಿಣಾಮವನ್ನುಂಟು ಮಾಡುವದಕ್ಕಾಗಿ, ಹಾಡಿನ ಲಹರಿಗೆ ಮತ್ತಷ್ಟು ಮೆರಗು ನೀಡುವದಕ್ಕಾಗಿ ಇರುತ್ತದೆ. ಅದೇ ರೀತಿಯಲ್ಲಿಯೇ, 1ನೇ ವಚನದಲ್ಲಿರುವ ನಿಶ್ಯಬ್ದಕ್ಕೆ ಪ್ರಾಥಮಿಕ ಉದ್ದೇಶವು ಬಹುಶಃ ಮುಂದೆ ಬರಲಿದ್ದ ಪ್ರಕಟನೆಗಳಿಗಾಗಿ ಕಾತರವನ್ನು ಹೆಚ್ಚಿಸುವದಾಗಿದ್ದಿರಬಹುದು.

ಈ ನಿಶ್ಯಬ್ದಕ್ಕೆ ಇತರ ಉದ್ದೇಶಗಳನ್ನು ಸಹ ಮುಂದಿಡಲಾಗಿರುತ್ತದೆ: (1) ತುತೂರಿಗಳ ಮುಖ್ಯ ಉದ್ದೇಶವು ದುಷ್ಟರಲ್ಲಿ ಪಶ್ಚಾತ್ತಾಪವನ್ನು ತರುವದಾಗಿತ್ತಾದ್ದರಿಂದ (9:20, 21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಅರ್ಧ ಗಂಟೆ ಮೌನವು ದೇವರು ಮನುಷ್ಯರಿಗೆ ಪಶ್ಚಾತ್ತಾಪ ಪಡುವಂತೆ *ಕಾಲಾವಕಾಶ* ಕೊಟ್ಟದ್ದರಿಂದ ಅದು ಮಾನವರ ಕಡೆಗೆ ಆತನು ತೋರಿಸುವ ತಾಳ್ಮೆಯನ್ನು ಸಂಕೇತಿಸುತ್ತದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. (2) ಏಳನೆಯ ಮುದ್ರೆಯ ಎಲ್ಲಾ ಕ್ರಿಯೆಯು 1ನೇ ವಚನದಲ್ಲಿಯೇ ಸಿಕ್ಕುತ್ತದೆಂಬುದನ್ನು ನಂಬುವಂಥವರು ಈ ನಿಶ್ಯಬ್ದವು ನಮಗೆ ನಿತ್ಯತ್ವದ ಕುರಿತು ಅನೇಕ ವಾಸ್ತವಾಂಶಗಳನ್ನು ನಾವು ತಿಳಿಯುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಜ್ಞಾಪಿಸುತ್ತದೆಂದು ಹೇಳುತ್ತಾರೆ. (3) ಕೆಲವರು ಈ ನಿಶ್ಯಬ್ದದಲ್ಲಿ ಒಂದು ಗಹನವಾದ ಗೌರವವನ್ನು ಕಾಣುತ್ತಾರೆ.

ಕೆಲವು ವ್ಯಾಖ್ಯಾನಕಾರರು ಈ ನಿಶ್ಯಬ್ದಕ್ಕೆ ಹೆಚ್ಚುವರಿ ಉದ್ದೇಶವನ್ನು ಸೇರ್ಪಡೆಗೊಳಿಸುತ್ತಾರೆ. G. R. Beasley-Murrayನು ಗಮನಕ್ಕೆ ತರುವದೇನೆಂದರೆ, "ಸನ್ನಿವೇಶವು ಪರಲೋಕದಲ್ಲಿ ನಿಶ್ಯಬ್ದ ಉಂಟಾದದ್ದಕ್ಕೆ ಒಂದು ಕಾರಣವನ್ನು ಒದಗಿಸುತ್ತದೆ. 2ನೇ ವಚನದ ಬಳಿಕ ಬರುವ ಉಳಿದ ಪರಿಚ್ಛೇದದಲ್ಲಿ *ಪ್ರಾರ್ಥನೆ* ಕುರಿತ ಪ್ರಧಾನ ಚರ್ಚೆಯಾಂಶವು ಪ್ರಾಬಲ್ಯ ಹೊಂದಿರುತ್ತದೆ . . . ಆ ನಿಶ್ಯಬ್ದವು ಪ್ರಾರ್ಥನೆಗಳನ್ನು ಗಾಂಭೀರ್ಯತೆಯಿಂದ ಕೇಳಿಸಿಕೊಳ್ಳುವದಕ್ಕಾಗಿಯೇ ಆಗಿದೆ ಎಂಬುದು ನ್ಯಾಯಸಮ್ಮತವಾಗಿ ಕಾಣಿಸುತ್ತದೆ."[5] William Barclayನು ಹೀಗೆ ಬರೆದನು,

> ದೇವಜನರ ಪ್ರಾರ್ಥನೆಗಳು ಇನ್ನು ಸ್ವಲ್ಪ ಕ್ಷಣಗಳಲ್ಲಿಯೇ ದೇವರು ಮುಂದೆ ಏರಿ ಹೋಗಲಿದ್ದವು; ಮತ್ತು ದೇವಜನರ ಪ್ರಾರ್ಥನೆಗಳು ಕೇಳಿಸಿಕೊಳ್ಳಲ್ಪಡುವಂತಾಗಲು ಪರಲೋಕದಲ್ಲಿರುವ ಸಮಸ್ತವು ಸ್ತಬ್ಧಗೊಂಡಿರಬಹುದಾಗಿದೆ . . . ದೇವರ ಕಿವಿಗಳು ಆತನಲ್ಲಿ ಭರವಸವಿಡುವ ಅತ್ಯಂಥ ದೀನ ಜನರ ಪಿಸುಮಾತಿನ ಪ್ರಾರ್ಥನೆಯನ್ನು ಸಹ ಆಲಿಸುವಂತಾಗುವದಕ್ಕೆ ಪರಲೋಕದಲ್ಲಿನ ಸಂಗೀತವು ಸಹ ಮತ್ತು ಪ್ರಕಟನೆಯ ಗುಡುಗುಗಳು ಸಹ ಸ್ಥಗಿತಗೊಂಡವು.[6]

Frank Packನು ಇದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾನೆ: "ಭೂಮಿಯ ಮೇಲಿರುವ . . .

ದೇವಜನರ ಪ್ರಾರ್ಥನೆಗಳು ಆಲಿಸಲ್ಪಡುವ ಹಾಗೆ ದೇವದೂತರ ಗಣಗಳು, ಹಿರಿಯರು ಹಾಗೂ ನಾಲ್ಕು . . . ಜೀವಿಗಳ ಜೊತೆಯಲ್ಲಿ ಮಾಡುತ್ತಿದ್ದ ಸ್ತೋತ್ರಗಳು ಸ್ಥಗಿತಗೊಂಡವು."[7]

ಕೆಲವರು ಇದಕ್ಕೆ ಆಕ್ಷೇಪಣೆ ಎತ್ತಬಹುದು, "ಆದರೆ ತನ್ನ ಜನರನ್ನು ಕೇಳಿಸಿಕೊಳ್ಳಬೇಕಾದರೆ ದೇವರಿಗೆ ಸಂಪೂರ್ಣ ನಿಶ್ಯಬ್ದದ ಅಗತ್ಯವೇನಿಲ್ಲವಲ್ಲಾ." ಅದು ನಿಜವೇ, ಆದರೆ ಈ ನಿಶ್ಯಬ್ದವು ಏನನ್ನು ಸೂಚಿಸುತ್ತದೆಂದರೆ ಗೌರವಾನ್ವಿತರೊಬ್ಬರು ಮಾತಾಡುವಾಗ, ಕೇಳಿಸಿಕೊಳ್ಳುವವನು ಸಾಧ್ಯವಾದಷ್ಟು ಪರಿಸ್ಥಿತಿಗಳನ್ನು ಅದಕ್ಕೆ ಸೂಕ್ತವಾಗಿರುವಂತೆ ಮಾಡಲು ಪ್ರಯತ್ನಿಸುತ್ತಾನೆ; ಆತನು ಮೌನ ಹಾಗೂ ಪ್ರಶಾಂತವಾಗಿ ಇರುತ್ತಾನಷ್ಟೆ. ಅದೇ ರೀತಿಯಲ್ಲಿಯೇ, ದೇವರು ತಾನು ದೇವಜನರ ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳುವದಕ್ಕೆ ಪರಲೋಕ ಮತ್ತು ಭೂಲೋಕಗಳೆರಡನ್ನೂ ಶಾಂತವಾಗಿರುವಂತೆ ಮಾಡಿದ್ದು ಸಾಂಕೇತಿಕವಾಗಿರುತ್ತದೆ. "ಇಸ್ರಾಯೇಲ್ಯರ ಸ್ತುತಿಗಳು ಪರಲೋಕದಲ್ಲಿ ಕೇಳಿಸಲ್ಪಡುವಂತಾಗಲು . . . ದೇವದೂತರು ಹಾಡುವದನ್ನು ನಿಲ್ಲಿಸುವದರ ಕುರಿತು ತಾಲ್ಮುಡ್‌ನಲ್ಲಿ ಉಲ್ಲೇಖವಿರುತ್ತದೆ."[8] Eugene Petersonನು ಹೀಗೆ ಬರೆಯುತ್ತಾನೆ,

> ನಾವು ಒಂದು ಗದ್ದಲದಿಂದ ಕೂಡಿದ ಲೋಕದಲ್ಲಿ ಜೀವಿಸುತ್ತೇವೆ. ನಮ್ಮನ್ನು ಕೂಗಲಾಗುತ್ತದೆ, ಪ್ರೋತ್ಸಾಹಿಸಲಾಗುತ್ತದೆ, ಕರೆಯಲಾಗುತ್ತದೆ. ಪ್ರತಿಯೊಬ್ಬರೂ ನಮಗೊಂದು ತುರ್ತು ಸಂದೇಶವನ್ನು ಹೊಂದಿರುತ್ತಾರೆ. ನಮ್ಮ ಸುತ್ತಲೂ ಗಲಾಟೆಗಳಿರುತ್ತವೆ: ದೂರವಾಣಿ, ರೇಡಿಯೋ, ಟಿವಿ, ಸ್ಟೀರಿಯೋ ಇತ್ಯಾದಿಗಳು. ಸಂದೇಶಗಳನ್ನು ಕಿವಿಗಳು ಕಿವುಡಾಗುವಂತೆ ಉಚ್ಛ ಸ್ವರಕ್ಕೆ ಏರಿಸಲಾಗುತ್ತದೆ. ಈ ಪ್ರಪಂಚವು ಒಂದು ಜನರ ದೊಂಬಿಯಾಗಿದ್ದು ಏಕ ಕಾಲದಲ್ಲಿಯೇ ಪ್ರತಿಯೊಬ್ಬರೂ ಮಾತಾಡುತ್ತಿದ್ದಾರೆ ಮತ್ತು ಒಬ್ಬನೂ ಕೇಳಿಸಿಕೊಳ್ಳಲು ಮನಸ್ಸನ್ನು ಹೊಂದಿಲ್ಲ ಅಥವಾ ಶಕ್ತನಾಗಿರುವದಿಲ್ಲ. ಆದರೆ ದೇವರು ಕೇಳಿಸಿಕೊಳ್ಳುತ್ತಾನೆ . . . ಆತನು ನಮ್ಮೊಂದಿಗೆ ಮಾತಾಡುವದಕ್ಕಿಂತಲೂ ಆತನು ನಮ್ಮನ್ನು ಕೇಳಿಸಿಕೊಳ್ಳುವದು ಇನ್ನಷ್ಟು ಅಧಿಕ ಅತ್ಯಾಶ್ಚರ್ಯವಾಗಿರುತ್ತದೆ . . .
>
> ನಾವು ಹೇಳುವದೆಲ್ಲವನ್ನೂ, ಪ್ರತಿಯೊಂದು ರೋದನೆ, ಪ್ರತಿಯೊಂದು ಗುಣುಗುಟ್ಟುವಿಕೆ, ಪ್ರಾರ್ಥನೆಯಲ್ಲಿನ ಪ್ರತಿಯೊಂದು ತೊದಲು ನುಡಿಯ ಪ್ರಯತ್ನ: ಇದೆಲ್ಲದಕ್ಕೂ ಕಿವಿಗೊಡಲಾಗುತ್ತದೆ. ಪರಲೋಕವೆಲ್ಲಾ ಮೌನವಾಗಿ ಬಿಡುವದು. ದೇವರು ಕೇಳಿಸಿಕೊಳ್ಳುತ್ತಿದ್ದರೆ ದೇವದೂತರ ಗಟ್ಟಿಯಾದ ಸ್ವರಗಳು, ತೂರಿಕೊಂಡು ಹೋಗುವ ತುತೂರಿಯ ಸಂದೇಶಗಳು, ಗುಡುಗಿನ ಸಿಂಹಾಸನದ ಗೀತೆಗಳು ಸ್ತಬ್ಧಗೊಳಿಸಲ್ಪಡುತ್ತವೆ.[9]

ಅರ್ಧ ಗಂಟೆಯ ನಿಶ್ಯಬ್ದವು ಆ ಸೂಚ್ಯಾರ್ಥವನ್ನು ಹೊಂದಿದೆಯೋ ಅಥವಾ ಇಲ್ಲವೋ, ಒಟ್ಟಾರೆಯಾಗಿ ಆ ವಾಕ್ಯಭಾಗವು ತನಗೆ ವಿಶೇಷವಾದರ ಪ್ರಾರ್ಥನೆಗಳನ್ನು ದೇವರು ಆಲಿಸುತ್ತಾನೆಂಬುದನ್ನಂತೂ ಸಾರುವದಾಗಿದೆ. "ಯೋಹಾನನು ಆಗಿನ ಮತ್ತು ಈಗಿನ ಕಳವಳಕ್ಕೊಳಗಾಗಿರುವ ವಾಚಕರಿಗೆ ಹೇಳುತ್ತೀರುವದೇನೆಂದರೆ, ಪರಲೋಕದಲ್ಲಿ ಪ್ರಾರ್ಥನೆಗಳು ಕೇಳಿಸಿಕೊಳ್ಳಲ್ಪಡುತ್ತವೆ ಮತ್ತು ಅವುಗಳಿಗೆ ಉತ್ತರವು ಸಿಕ್ಕುವದು ಎಂಬುದೆ. ಕರುಣೆ ಮತ್ತು ನ್ಯಾಯತೀರ್ಪಿನ ದೇವರು ಸತ್ತವನಾಗಲಿ ಅಥವಾ ಕಿವುಡನಾಗಲಿ ಅಥವಾ ಉದಾಸೀನ ಮಾಡುವವನಾಗಲಿ ಅಲ್ಲ."[10]

ದೇವರು ತನ್ನ ಜನರನ್ನು ಕೇಳಿಸಿಕೊಳ್ಳುತ್ತಾನೆಂಬ ಆಶ್ಚರ್ಯಕರವಾದ ಸತ್ಯವು ಬೈಬಲಿನುದ್ದಕ್ಕೂ ಕಲಿಸಲ್ಪಡುತ್ತದೆ. ಜ್ಞಾನೋಕ್ತಿಗಳು ಹೀಗೆ ಹೇಳುತ್ತದಷ್ಟೆ, "ಯೆಹೋವನು ದುಷ್ಟರಿಗೆ ದೂರ, ಶಿಷ್ಟರ ಬಿನ್ನಹಕ್ಕೆ ಹತ್ತಿರ" (15:29). ದೇವರು ಸೊಲೊಮೋನನಿಗೆ ಹೀಗೆ ಹೇಳಿದನು, "ನೀನು ನನಗೆ ಮಾಡಿದ ಪ್ರಾರ್ಥನೆಯನ್ನೂ ವಿಜ್ಞಾಪನೆಯನ್ನೂ ಕೇಳಿದ್ದೇನೆ"

(1 ಅರಸು 9:3). ಆತನು ಹಿಜ್ಕೀಯನಿಗೆ ಹೀಗೆ ಹೇಳಿ ಕಳುಹಿಸಿದನು, "ನಾನು ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ; ನಿನ್ನ ಕಣ್ಣೀರನ್ನು ನೋಡಿದ್ದೇನೆ" (2 ಅರಸು 20:5). ದೇವರು ಈಗಲೂ ನಂಬಿಗಸ್ತರ ಪ್ರಾರ್ಥನೆಗಳನ್ನು ಮತ್ತು ವಿಜ್ಞಾಪನೆಗಳನ್ನು ಆಲಿಸುತ್ತಾನೆ. ಪೇತ್ರನು ಹೀಗೆ ಬರೆದನು, "ಯಾಕೆಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ" (1 ಪೇತ್ರ 3:12). ಯೋಹಾನನು ಅದರೊಂದಿಗೆ ಸಹಮತವನ್ನು ವ್ಯಕ್ತಪಡಿಸುತ್ತಾನೆ: "ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು" (1 ಯೋಹಾನ 5:14). "ಆದಿ ಕ್ರೈಸ್ತ ಪ್ರಾರ್ಥನೆಯನ್ನು ಭಿನ್ನವಾಗಿರುವ ವಿಶಿಷ್ಟತೆಯು [ಏನಾಗಿತ್ತೆಂದರೆ] ಕೇಳಿಸಿಕೊಳ್ಳಲ್ಪಡುತ್ತದೆಂಬ ಖಚಿತತೆಯೇ."[11]

**ವಚನ 2.** ಯೋಹಾನನು ಬಳಿಕ ಹೀಗೆ ಬರೆಯುತ್ತಾನೆ, **ಆಗ ದೇವರ ಸನ್ನಿಧಿಯಲ್ಲಿ ನಿಂತಿರುವ ಏಳು ಮಂದಿ ದೇವದೂತರನ್ನು ಕಂಡೆನು; ಅವರಿಗೆ ಏಳು ತುತೂರಿಗಳು ಕೊಡಲ್ಪಟ್ಟವು.** ಪ್ರೇರಿತವಲ್ಲದ ಯೆಹೂದಿ ಅಂತ್ಯಕಾಲಿಕ ಸಾಹಿತ್ಯವು ದೇವರ ಮುಂದೆ ನಿಲ್ಲುವ ಏಳು ಪ್ರಧಾನದೂತರ ವಿಷಯವಾಗಿ ಮಾತಾಡುತ್ತದೆ, ಇದರಿಂದಾಗಿ ಕೆಲವು ವ್ಯಾಖ್ಯಾನಕಾರರು ಈ 2ನೇ ವಚನವು ಆ ಪ್ರೇರಿತವಲ್ಲದ ಉಪದೇಶವನ್ನು ಪ್ರತಿಫಲಿಸುತ್ತದೆಂದು ನಿರ್ಧಾರಕ್ಕೆ ಬಂದಿರುತ್ತಾರೆ. ಎರಡು ಪ್ರಮುಖ ಉಲ್ಲೇಖನಗಳೆಂದರೆ ಹನೋಕ 20:1-7 ಮತ್ತು ಟೊಬಿತ್ 12:15. ಹನೋಕ ಮತ್ತು ಟೋಬಿತ್ ರೀತಿಯ ಪುಸ್ತಕಗಳು ಪ್ರೇರಿತವಲ್ಲದ ಉಪದೇಶಗಳಾಗಿವೆಯೇ, ಹೊರತು ಕರ್ತನಿಂದ ಬಂದಿರುವ ಪ್ರಕಟನೆಗಳಲ್ಲ. ಆ ಪುಸ್ತಕಗಳಲ್ಲಿರುವ ಎರಡು ಉಲ್ಲೇಖನಗಳು ಪ್ರಧಾನದೂತರಿಗೆ ಹೆಸರುಗಳನ್ನು ನೀಡುತ್ತವೆ. ಆ ಏಳು ಮಂದಿಯಲ್ಲಿ, ಶಾಸ್ತ್ರಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಇಬ್ಬರೇ ಇಬ್ಬರು ದೂತರೆಂದರೆ ಮಿಕಾಯೇಲ ಮತ್ತು ಗಾಬ್ರಿಯೇಲ ಮಾತ್ರವೇ (ದಾನಿಯೇಲ 8:16; 9:21; 10:13, 21; 12:1; ಲೂಕ 1:26; ಯೂದನು 9; ಪ್ರಕಟನೆ 12:7).

ಕೆಲವರು **ಏಳು ಮಂದಿ ದೇವದೂತರು** ಎಂಬ ಪದಗುಚ್ಛದ ಮುಂದೆ ನಿರ್ದಿಷ್ಟ ಗುಣವಾಚಿಯು (the) ಇರುವದರಲ್ಲಿ ಮಹತ್ವಪೂರ್ಣತೆಯನ್ನು ಕಾಣುತ್ತಾರೆ, ಆದರೆ ಪ್ರಕಟನೆ ಪುಸ್ತಕದಲ್ಲಿ ಇದೇನೂ ಅಸಹಜವಾದದ್ದೇನೂ ಆಗಿರುವದಿಲ್ಲ: ಏಳು ಸಭೆಗಳ ಪ್ರತಿಯೊಬ್ಬ ದೂತನು/ಸಂದೇಶಕರ ಮುಂದೆ ನಿರ್ದಿಷ್ಟ ಗುಣವಾಚಿಯು ಬಳಸಲ್ಪಟ್ಟಿತ್ತು (ನೋಡಿರಿ 2:1), ಮತ್ತು ಏಳು ಪಾತ್ರೆಗಳನ್ನು ಸುರಿಸಿದ ದೇವದೂತರು ಅದೇ ವಿಧದಲ್ಲಿಯೇ ಕರೆಯಲ್ಪಟ್ಟಿರುತ್ತಾರೆ (ನೋಡಿರಿ 16:3). ವ್ಯಕ್ತಿಗತ ದೇವದೂತರಿಗೂ ಸಹ ಕೆಲವು ಸಾರಿ ನಿರ್ದಿಷ್ಟ ಗುಣವಾಚಿಯನ್ನು ಬಳಸಲಾಗಿರುತ್ತದೆ (ನೋಡಿರಿ 8:5). ಸಂಖ್ಯೆ "ಏಳು" ಮತ್ತು ದೇವರ "ಮುಂದೆ" ನಿಂತಿರುವ ಯೋಚನೆ (ನೋಡಿರಿ 1:4; 4:5, 10; 5:8; 7:9, 11, 15; 11:4, 16; 14:3; 15:4) ಇವೆರಡೂ ಪ್ರಕಟನೆ ಪುಸ್ತಕದಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತವಾದ್ದರಿಂದ, "ದೇವರ ಸನ್ನಿಧಿಯಲ್ಲಿ ನಿಂತಿರುವ ಏಳು ಮಂದಿ ದೇವದೂತರು" ಎಂಬ ಪದಗುಚ್ಛಕ್ಕೆ ವಿಶೇಷವಾದ ಮಹತ್ವವೇನೂ ಇಲ್ಲದಿರಬಹುದಾಗಿದೆ. ಏಳು ತುತೂರಿಗಳನ್ನು ಊದುವದಕ್ಕೆ ಏಳು ದೇವದೂತರ ಅಗತ್ಯವಿತ್ತು, ಮತ್ತು ಈ ಸೇವೆ ಮಾಡುವ ಆತ್ಮಗಳು ಲಭ್ಯವಿದ್ದವು. ಇಲ್ಲಿ ಒತ್ತು ದೇವದೂತರ ಮೇಲೆ ಅಲ್ಲ, ಆದರೆ ತುತೂರಿಗಳ ಮೇಲೆಯೇ ಆಗಿದೆ.

## ಒಂದು ಚಿನ್ನದ ದೂಪಾರತಿ ಹಿಡಿದುಕೊಂಡಿದ್ದ ಒಬ್ಬ ದೇವದೂತನು (8:3-6)

**3ಆ ಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು; ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು. 4ಆಗ ಧೂಪದ ಹೊಗೆಯು ದೇವದೂತನ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು. 5ತರುವಾಯ ಆ ದೇವದೂತನು ಧೂಪಾರತಿಯನ್ನು ತೆಗೆದುಕೊಂಡು ಯಜ್ಞವೇದಿಯ ಮೇಲಿದ್ದ ಕೆಂಡಗಳಿಂದ ತುಂಬಿಸಿ ಭೂಮಿಗೆ ಬೀಸಾಡಿದನು. ಆಗ ಗುಡುಗುಗಳೂ ವಾಣಿಗಳೂ ಮಿಂಚುಗಳೂ ಭೂಕಂಪಗಳೂ ಉಂಟಾದವು. 6ಏಳು ತುತೂರಿಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರು ತುತೂರಿಗಳನ್ನೂದುವದಕ್ಕೆ ಸಿದ್ಧ ಮಾಡಿಕೊಂಡರು.**

**ವಚನ 3.** ಏಳು ತುತೂರಿಗಳನ್ನು ಊದುವಂತೆ ಏಳು ಮಂದಿ ದೇವದೂತರಿಗೆ ಅನುಮತಿಯನ್ನು ಕೊಡುವದಕ್ಕೆ ಮುಂಚೆ, ಇನ್ನೊಬ್ಬ ದೇವದೂತನು ದೃಶ್ಯದಲ್ಲಿ ಕಾಣಿಸಿಕೊಳ್ಳುತ್ತಾನೆ. **ಆ ಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು; ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು . . . ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು**. ಇದೆಲ್ಲವೂ ಏಳನೆಯ ಮುದ್ರೆಯು ಒಡೆಯಲ್ಪಡುವಿಕೆ (ವ. 1) ಮತ್ತು ಗುಡುಗುಗಳು ಉಂಟಾಗುವಿಕೆಯ (ವ. 5) ನಡುವೆ ಸಂಭವಿಸಿತು ಎಂಬುದಾಗಿ ಕೆಲವರು ಯೋಚಿಸುತ್ತಾರೆ. ಅದು ನಿಜವಾಗಿದ್ದಲ್ಲಿ, ನಿಶ್ಶಬ್ದತೆಯು ಕ್ರಿಯೆಯ ಪ್ರಭಾವಕ್ಕೆ ಮತ್ತಷ್ಟು ಕೂಡಿಸಿರಬಹುದಾಗಿತ್ತು.

ಕೆಲವರು ಈ ವಾಕ್ಯಭಾಗವನ್ನು ಕ್ರೈಸ್ತರಿಗೋಸ್ಕರ ದೆವದೂತರು ವಿಜ್ಞಾಪನೆ ಮಾಡುತ್ತಾರೆಂದು ಕಲಿಸುವದಕ್ಕಾಗಿ ಬಳಸುವದಕ್ಕೆ ಪ್ರಯತ್ನಿಸಿರುತ್ತಾರೆ. ಹೇಗೂ, ಧೂಪವು ದೇವದೂತನಿಂದಲೇ ಉಗಮವಾಗಲಿಲ್ಲ, ಆದರೆ **ಅವನಿಗೆ . . . ಕೊಡಲ್ಪಟ್ಟಿತು**. ದೇವದೂತನು ಕೇವಲ ಒಬ್ಬ ಸೇವಕನಷ್ಟೆ ಆಗಿದ್ದು ಪ್ರಕಟನೆ ಪುಸ್ತಕದಲ್ಲೆಲ್ಲಾ ಕಂಡು ಬರುವ ಪ್ರಕಾರವೇ ಸಿಂಹಾಸನದಿಂದ ಬರುವ ಆಜ್ಞೆಗಳನ್ನು ಕಾರ್ಯರೂಪಕ್ಕೆ ತರುವವನಾಗಿದ್ದನು.

ದೇವದೂತನಿಗೆ **ಬಹಳ ಧೂಪ** ಕೊಡಲ್ಪಟ್ಟಿತೆಂಬ ವಾಸ್ತವಾಂಶವು ಇದು ಯೆಹೂದಿ ದೋಷಪರಿಹಾರಕ ದಿನದಿಂದ ಆರಿಸಿಕೊಂಡಿರುವ ಸಂಕೇತವಾಗಿರುತ್ತದೆಂಬ ಮನವರಿಕೆಯನ್ನು ಕೆಲವು ವ್ಯಾಖ್ಯಾನಕಾರರಲ್ಲಿ ಉಂಟು ಮಾಡಿರುತ್ತದೆ, ಯಾಕೆಂದರೆ ದೋಷಪರಿಹಾರಕ ದಿನದಂದು ಬೇರೆ ಎಲ್ಲಾ ದಿನಗಳಿಗಿಂತಲೂ ಅಧಿಕವಾದ ಧೂಪವನ್ನು ಪರಿಶುದ್ಧ ಸ್ಥಳದೊಳಕ್ಕೆ ತೆಗೆದುಕೊಂಡು ಹೋಗಲಾಗುತ್ತಿತ್ತು.

ದೇವದೂತನಿಗೆ ಧೂಪವು ಕೊಡಲ್ಪಟ್ಟಿದ್ದರ ಉದ್ದೇಶವು **ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ** ಆಗಿತ್ತು. ಈ ದೃಶ್ಯವು 6ನೇ ಅಧ್ಯಾಯದಲ್ಲಿ ದೃಶ್ಯದೊಂದಿಗೆ ಸಂಬಂಧ ಹೊಂದಿದ್ದು, ಅಲ್ಲಿ ರಕ್ತಸಾಕ್ಷಿಗಳು, "ಇನ್ನು ಎಷ್ಟು ಕಾಲದ ವರೆಗೂ?" (6:9, 10) ಎಂದು ಕೂಗಿದರು. ಹೇಗೂ, ಇಲ್ಲಿರುವ ಪ್ರಾರ್ಥನೆಗಳು ಕೇವಲ ರಕ್ತಸಾಕ್ಷಿಗಳದ್ದು ಮಾತ್ರವೇ ಅಲ್ಲ, ಆದರೆ **ದೇವಜನರೆಲ್ಲರ** ಪ್ರಾರ್ಥನೆಗಳಾಗಿದ್ದವೆಂಬುದನ್ನು ಗಮನಿಸುವದು ಪ್ರಾಮುಖ್ಯವಾಗಿರುತ್ತದೆ.

ಇಲ್ಲಿ ಕಾಣುವ ಸಾಂಕೇತಿಕತೆಯು ಹಳೆಯ ಒಡಂಬಡಿಕೆಯಿಂದ ಬರುವಂಥದ್ದಾಗಿದೆ:

**ಚಿನ್ನದ ಧೂಪವೇದಿಯು** ದೇವದರ್ಶನ ಗುಡಾರದಲ್ಲಿನ ಅತಿ ಪರಿಶುದ್ಧ ಸ್ಥಳದೊಳಗೆ ಇರುತ್ತಿದ್ದ ಧೂಪವೇದಿಯಾಗಿತ್ತು (ವಿಮೋಚನಕಾಂಡ 30:1-8). ಅದೊಂದು ಚಿಕ್ಕ ವೇದಿಯಾಗಿದ್ದು ಪ್ರತಿಯೊಂದು ಬದಿಯಲ್ಲಿ ಸುಮಾರು ಮೂರು ಅಡಿಗಳಷ್ಟು ಉದ್ದ, ಸುಮಾರು ಹದಿನೆಂಟು ಇಂಚುಗಳಷ್ಟು ಅಗಲವಾಗಿದ್ದು ಕಟ್ಟಿಗೆಯಿಂದ ನಿರ್ಮಿಸಲ್ಪಟ್ಟು ಚಿನ್ನದ ತಗಡಿನಿಂದ ಮುಚ್ಚಲ್ಪಟ್ಟಿತ್ತು. ಒಂದು ಧೂಪಾರತಿ ಎಂದು ಕರೆಯಲ್ಪಡುವ ಒಂದು ಕೆಂಡ ಇಡುವ ತಟ್ಟೆಯು ವೇದಿಯ ಮೇಲ್ಗಡೆಯಲ್ಲಿ ಇಡಲ್ಪಟ್ಟು ಅದರಲ್ಲಿ ಧೂಪವು ಸುಡಲ್ಪಡುತ್ತಿತ್ತು. ಈ ವೇದಿಯು ನೇರವಾಗಿ ಪರಿಶುದ್ಧ ಸ್ಥಳವನ್ನು ಅತಿ ಪರಿಶುದ್ಧ ಸ್ಥಳದಿಂದ ಅಥವಾ "ಮಹಾ ಪರಿಶುದ್ಧ ಸ್ಥಳ" (KJV) ವಿಂಗಡಿಸುವ ಪರದೆಯ ಎದುರಿನಲ್ಲಿಯೇ ಇತ್ತು.

ಈಗಾಗಲೇ ತಿಳಿಸಿರುವ ಪ್ರಕಾರ, ಈ ದೃಶ್ಯವು 6ನೇ ಅಧ್ಯಾಯದಲ್ಲಿರುವ ದೃಶ್ಯದೊಂದಿಗೆ ಸಹ ಸಂಬಂಧವನ್ನು ಹೊಂದಿದ್ದು, ಅಲ್ಲಿ ರಕ್ತಸಾಕ್ಷಿಗಳ ಆತ್ಮಗಳು "ಯಜ್ಞವೇದಿಯ ಕೆಳಗೆ" ಇದ್ದವು (6:9). 6:9-11 ರಲ್ಲಿರುವ ಯಜ್ಞವೇದಿಯು ದೇವದರ್ಶನ ಗುಡಾರದ ಎದುರಿಗೆ ಇರುತ್ತಿದ್ದ ಹಳೆಯ ಒಡಂಬಡಿಕೆಯ ಹಿತ್ತಾಳೆಯ ಯಜ್ಞವೇದಿಯೊಂದಿಗೆ ಸಂಬಂಧ ಹೊಂದಿದೆ. ಪ್ರಕಟನೆ ಪುಸ್ತಕದಲ್ಲಿ ಒಂದೇ ಒಂದು ಯಜ್ಞವೇದಿಯು ಪ್ರಸ್ತಾಪಿಸಲ್ಪಟ್ಟಿರುವದು ಸ್ಪಷ್ಟವಾಗಿದೆ, ಅದು ಕೆಲವು ಸಾರಿ ಚಿನ್ನದ ಧೂಪವೇದಿಯಾಗಿ ಮತ್ತು ಇನ್ನು ಕೆಲವು ಸಾರಿ ಹಿತ್ತಾಳೆಯ ಯಜ್ಞವೇದಿ ಎಂದು ಚಿತ್ರಿಸಲ್ಪಟ್ಟಿದೆ. Mounceನು ಹೀಗೆ ಹೇಳುತ್ತಾನೆ, "ಯೋಹಾನನ ದರ್ಶನದಲ್ಲಿ ಎರಡು [ಯಜ್ಞವೇದಿಗಳು] ಒಟ್ಟಿಗೆ ಸೇರಿ ಏಕೆ ಒಂದಾಗಬಾರದೆಂಬುದಕ್ಕೆ ಕಾರಣವೇ ಇರುವದಿಲ್ಲ."[12] 8:1-5ರಲ್ಲಿನ ಯಜ್ಞವೇದಿಯ ವಿಷಯದಲ್ಲಿ, Packನು ಹೀಗೆ ಬರೆಯುತ್ತಾನೆ, "ಈ ವಾಕ್ಯಭಾಗದಲ್ಲಿ ಎರಡು ಭಿನ್ನವಾದ ಯಜ್ಞವೇದಿಗಳು ಕಾಣಿಸಿಕೊಳ್ಳುವ ಸಂದೇಹಕರವಾಗಿದೆ, ಆದರೆ ಬಹುಶಃ ಚಿನ್ನದ ಧೂಪವೇದಿ ಹಾಗೂ ದೋಷಪರಿಹಾರಕ ಯಜ್ಞವೇದಿಗಳೆರಡೂ ಈ ವೇದಿಯೊಳಗೆ ಒಂದುಗೂಡಿಸಲ್ಪಟ್ಟಿರಬಹುದಾಗಿದೆ."[13] 6ನೇ ಅಧ್ಯಾಯದಲ್ಲಿನ ವೇದಿಗೆ ತದ್ವಿರುದ್ಧವಾಗಿ, 8ನೇ ಅಧ್ಯಾಯದಲ್ಲಿನ ಯಜ್ಞವೇದಿಯು ಧೂಪಾರತಿಯ ಗುಣಸ್ವಭಾವಗಳನ್ನು ಅಧಿಕವಾಗಿ ಹೊಂದಿರುತ್ತದೆ: ಅದು ಚಿನ್ನದಿಂದ ಕೂಡಿರುತ್ತದೆ (ಹಿತ್ತಾಳೆಯದ್ದಲ್ಲ) ಮತ್ತು ಅದರ ಮೇಲೆ ಧೂಪವು (ಯಜ್ಞಗಳಲ್ಲ) ಸುಡಲ್ಪಡುತ್ತಿತ್ತು.

**ವಚನ 4. ಆಗ ಧೂಪದ ಹೊಗೆಯು ದೇವದೂತನ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು.** ಒಂದು ನಿಗದಿತ ಸಮಯದಲ್ಲಿ, ಯಾಜಕನೊಬ್ಬನು ಧೂಪರಾತಿಯನ್ನು ದೇವದರ್ಶನ ಗುಡಾರದ ಹೊರಗೆ ಇರುತ್ತಿದ್ದ ಹಿತ್ತಾಳೆಯ ವೇದಿಯ ಬಳಿಗೆ (ದೋಷಪರಿಹಾರಕ ಯಜ್ಞಗಳ ವೇದಿ) ಕೊಂಡೊಯ್ದು ಕೆಂಡದ ತಟ್ಟೆಯಲ್ಲಿ ಕೆಂಡಗಳನ್ನು ತುಂಬಿಸುತ್ತಿದ್ದನು. (ನೋಡಿರಿ ಯಾಜಕಕಾಂಡ 16:12; ಅರಣ್ಯಕಾಂಡ 16:46; ಯಜ್ಞದ ವೇದಿಯ ಮೇಲೆ ಯಾವಾಗಲೂ ಉರಿಯುವ ಕೆಂಡಗಳಿರುತ್ತಿದ್ದರೆ, ಧೂಪವೇದಿಯ ಮೇಲೆ ಕೆಂಡಗಳು ಇರುತ್ತಿರಲಿಲ್ಲ; ಈ ಕಾರಣದಿಂದ ಈ ವಾಕ್ಯಭಾಗದಲ್ಲಿ ಉಲ್ಲೇಖಿಸಿರುವ ವೇದಿಯು ಬಹುಶಃ ಯಜ್ಞವೇದಿಯಾಗಿರಬಹುದಾಗಿದೆ.) ಬಳಿಕ ಯಾಜಕನು ಧೂಪಾರತಿಯನ್ನು ತೆಗೆದುಕೊಂಡು ಹೋಗಿ ಪರಿಶುದ್ಧ ಸ್ಥಳದಲ್ಲಿ ಧೂಪವನ್ನು ಹಾಕುವನು, ಕೆಂಡಗಳಿಡುವ ತಟ್ಟೆಯನ್ನು ಚಿನ್ನದ ಧೂಪವೇದಿಯ ಮೇಲಿಡುವನು, ಮತ್ತು ಕೆಂಡಗಳ ಮೇಲೆ ಪುಡಿ ಮಾಡಲ್ಪಟ್ಟಿರುವ ಧೂಪವನ್ನು ಹಾಕುತ್ತಿದ್ದನು (ನೋಡಿರಿ ಯಾಜಕಕಾಂಡ 16:12, 13). ಶೀಘ್ರವೇ, ಮಧುರವಾದ ಸುವಾಸನೆಯು ಪರಿಶುದ್ಧ ಸ್ಥಳವನ್ನು ತುಂಬಿಕೊಳ್ಳುತ್ತಿತ್ತು ಮತ್ತು ಕ್ರಮೇಣದಲ್ಲಿ ಅತಿ ಪರಿಶುದ್ಧ ಸ್ಥಳದೊಳಗೆ ತೂರಿಕೊಂಡು ಹೋಗುತ್ತಿತ್ತು. ಅತಿ ಪರಿಶುದ್ಧ ಸ್ಥಳದಲ್ಲಿ ಒಡಂಬಡಿಕೆಯ ಮಂಜೂಷವಿತ್ತು, ಅಥವಾ "ಸಾಕ್ಷಿಯ

ಮಂಜೂಷ" (NASB) ಇತ್ತು, ಅದರ ಮೇಲೆ ಕೃಪಾಸಿಂಹಾಸನವಿರುತ್ತಿತ್ತು: ದೇವರು ತನ್ನ ಜನರನ್ನು ಸಂಧಿಸುವೆನೆಂದು ವಾಗ್ದಾನ ಮಾಡಿದ ಸ್ಥಳ (ನೋಡಿರಿ ವಿಮೋಚನಕಾಂಡ 25:17-22; 26:34). ಯೆಹೂದಿ ಯೋಚನೆಯಲ್ಲಿ, ಸುವಾಸನೆಯ ಹೊಗೆಯು ಸ್ವತಃ ದೇವರ ಸನ್ನಿಧಿಯೊಳಗೇ ಏರಿಹೋಗುವದೆಂದು ಭಾವಿಸಲಾಗಿತ್ತು. ಧೂಪವೇದಿಯು ಅತಿ ಪರಿಶುದ್ಧ ಸ್ಥಳಕ್ಕೆ ಎಷ್ಟೊಂದು ನಿಕಟದಲ್ಲಿತ್ತೆಂದರೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಚಿನ್ನ ಧೂಪವೇದಿಯು ವಾಸ್ತವಿಕದಲ್ಲಿ ಅತಿ ಪರಿಶುದ್ಧ ಸ್ಥಳದ *ಒಳಗಡೆಯೇ* ಇರುವದಾಗಿ ಬಣ್ಣಿಸಿರುತ್ತಾನೆ (ನೋಡಿರಿ ಇಬ್ರಿಯ 9:3, 4).

ಹೆಚ್ಚು ಕಡಿಮೆ ಆರಂಭದಿಂದಲೂ, ಚಿನ್ನದ ವೇದಿಯ ಮೇಲೆ ಸುಡಲ್ಪಡುತ್ತಿದ್ದ ಧೂಪವು **ಪ್ರಾರ್ಥನೆಗಳೊಂದಿಗೆ** ದೇವರ ಬಳಿಗೆ ಏರಿ ಹೋಗುತ್ತದೆ ಎಂಬ ಭಾವನೆಯೊಂದಿಗೆ ಜೋಡಿಸಲ್ಪಟ್ಟಿರುತ್ತದೆ. ದಾವೀದನು ಹೀಗೆ ಬರೆದನು. "ನನ್ನ ಪ್ರಾರ್ಥನೆಯು ಧೂಪದಂತೆಯೂ ನಾನು ಕೈಯೆತ್ತುವದು ಸಂಧ್ಯಾನೈವೇದ್ಯದಂತೆಯೂ ನಿನಗೆ ಸಮರ್ಪಕವಾಗಲಿ" (ಕೀರ್ತನೆ 141:2). ದೇವಾಲಯವು ಕಟ್ಟಲ್ಪಟ್ಟ ಬಳಿಕ, ದಿನಕ್ಕೆ ಎರಡು ಸಾರಿ ಧೂಪವನ್ನು ಸುಡುವ ವೃತಾಚಾರಣೆಯ ವೇಳೆ (ವಿಮೋಚನಕಾಂಡ 30:7, 8), ಯೆಹೂದ್ಯರು ಪ್ರಾರ್ಥನೆಗೋಸ್ಕರ ಸ್ತ್ರೀಯರ ಅಂಗಳದಲ್ಲಿ ಕೂಡಿ ಬರುತ್ತಿದ್ದರು (ಲೂಕ 1:5, 8, 9, 11), "ಧೂಪವನ್ನು ಅರ್ಪಿಸುವ ಹೊತ್ತಿನಲ್ಲಿ ಜನರ ಗುಂಪೆಲ್ಲಾ ಹೊರಗೆ ನಿಂತು ದೇವರನ್ನು ಪ್ರಾರ್ಥಿಸುತ್ತಿದ್ದರು" (ಲೂಕ 1:10). ಧೂಪ ಮತ್ತು ಪ್ರಾರ್ಥನೆಗಳನ್ನು ಮಿಶ್ರಣಗೊಳಿಸುವ ಸಾದೃಶ್ಯವು ಆದಿ ಕ್ರೈಸ್ತರಿಗೆ ಪರಿಚಿತವಾಗಿದ್ದವು, ವಿಶೇಷವಾಗಿ ಒಂದು ಯೆಹೂದಿ ಹಿನ್ನಲೆಯಿಂದ ಬಂದವರಿಗೆ ಪರಿಚಿತವಾಗಿದ್ದವು. ಹೇಗೂ, ಈ ಭಾಷೆಯು ಸಾಂಕೇತಿಕವಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಈ ವಾಕ್ಯಭಾಗದಲ್ಲಿ ಧೂಪವು ಸಾಂಕೇತಿಕವಾಗಿ ಬಳಸಲ್ಪಡುವದು ಇಂದಿನ ಆರಾಧನೆಗಳನ್ನು ಧೂಪದ ಬಳಕೆಯನ್ನು ನ್ಯಾಯವೆಂದು ಸಮರ್ಥಿಸುವದಿಲ್ಲ (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪ್ರಕಟನೆ 5ರಲ್ಲಿ, ಇಪ್ಪತ್ತುನಾಲ್ಕು ಹಿರಿಯರು "ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳು" ಇದ್ದವು ಎಂಬುದಾಗಿ ಬಣ್ಣಿಸಲ್ಪಟ್ಟಿದ್ದಾರೆ (5:8). 8ನೇ ಅಧ್ಯಾಯದಲ್ಲಿ, ಈ ಚಿತ್ರಣವು ಸ್ವಲ್ಪ ಬದಲಾಗಿರುತ್ತದೆ: ಇಲ್ಲಿ ದೇವಜನರ ಪ್ರಾರ್ಥನೆಗಳೊಂದಿಗೆ ಧೂಪವು *ಸೇರಿಸಲ್ಪಡುತ್ತದೆ,* ಮತ್ತು ಬಳಿಕ "ಧೂಪದ ಹೊಗೆಯು ದೇವದೂತರ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗ*ಳೊಂದಿಗೆ* ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು" (ಒತ್ತಿ ಹೇಳಿದ್ದು ನನ್ನದು). ಪ್ರಕಟನೆ 8ರಲ್ಲಿರುವ ಪ್ರಾರ್ಥನೆಗಳು ಹಾಗೂ ಧೂಪದ ನಡುವೆ ಭಿನ್ನತೆಯನ್ನು ಮಾಡುವದಾದರೆ, ಧೂಪವು ಬಹುಶಃ ಕ್ರಿಸ್ತನು ಹಾಗೂ ಪವಿತ್ರಾತ್ಮನು ಮಾಡುವ ವಿಜ್ಞಾಪನೆ ಆಗಿರಬಹುದಾಗಿದೆ (ರೋಮಾ 8:26, 34; ನೋಡಿರಿ ಇಬ್ರಿಯ 7:25; 1 ಯೋಹಾನ 2:1). Leon Morrisನು ಗಮನಕ್ಕೆ ತರುವದೇನೆಂದರೆ, "ಪ್ರಾರ್ಥನೆಯು ಬಹಳಷ್ಟು ಸಾರಿ ಭಾವಿಸಿಕೊಳ್ಳುವ ಪ್ರಕಾರ ಏಕಾಂಗಿಯಾಗಿ ಹೊರಡುವದಿಲ್ಲ. ಅಲ್ಲಿ ಪರಲೋಕದಿಂದ ಸಹಾಯವು ದೊರಕುತ್ತದೆ ಮತ್ತು ನಮ್ಮ ಪ್ರಾರ್ಥನೆಗಳು ನಿಜಕ್ಕೂ ದೇವರನ್ನು ತಲುಪುತ್ತವೆ."[14]

ವೇದಿ ಮತ್ತು ಧೂಪದ ಚರ್ಚೆಯು ಇಲ್ಲಿ ಹೇಳಲಚ್ಚಿಸುವ ಅಂಶದಿಂದ ದಾರಿ ತಪ್ಪಿಸುವಂತೆ ಅವಕಾಶವನ್ನು ಕೊಡಬಾರದು: ಕ್ರೈಸ್ತರು ಪ್ರಾರ್ಥಿಸುವಾಗ, ಪರಲೋಕವು ಸಂತೋಷಗೊಳ್ಳುತ್ತದೆ (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹಳೆಯ ಒಡಂಬಡಿಕೆಯ ಭಾಷೆಯಲ್ಲಿ ಹೇಳುವದಾದರೆ, ಧೂಪವು ದೇವರ ಮೂಗಿಗೆ ಮಧುರವಾಗಿರುತ್ತಿತ್ತು. ಯಜ್ಞಗಳಿಗೆ ಸಂಬಂಧಿಸಿದಂತೆ ಹಳೆಯ ಒಡಂಬಡಿಕೆಯಲ್ಲಿ ಪದೇ ಪದೇ ಕಂಡು ಬರುವ ಒಂದು

ಪದಗುಚ್ಛವೆಂದರೆ "ಆಸ್ವಾದಿಸುವ ವಾಸನೆ" (KJV), "ಹಿತವಾದ ಸುವಾಸನೆ" (NASB), "ಘಮಗಮಿಸುವ ಸುವಾಸನೆ" (NIV) (ನೋಡಿರಿ ಆದಿಕಾಂಡ 8:21; ವಿಮೋಚನಕಾಂಡ 29:18; ಯಾಜಕಕಾಂಡ 1:9; ಅರಣ್ಯಕಾಂಡ 15:7). ABಯು ಈ ಪದಗುಚ್ಛವನ್ನು ಸ್ವಲ್ಪ ವಿವರಿಸುತ್ತದೆ: "ಆತನ ಹೃದಯಕ್ಕೆ ಒಂದು ಸಂತೃಪ್ತಿಕರವಾದ ಸುವಾಸನೆ." ಅದೇ ರೀತಿಯಲ್ಲಿಯೇ, ಕ್ರೈಸ್ತರ ಪ್ರಾರ್ಥನೆಗಳು ದೇವರ ದೃಷ್ಟಿಯಲ್ಲಿ ಮಧುರವಾಗಿರುತ್ತವೆ. "ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ" (ಜ್ಞಾನೋಕ್ತಿ 15:8). ದೇವರ ಜನರು ಪ್ರಾರ್ಥಿಸುವಾಗ ಪರಲೋಕವು ಸಂತೋಷಗೊಳ್ಳುತ್ತದೆ.

**ವಚನ 5.** ಕ್ರೈಸ್ತರು ಎಲ್ಲಾ ವಿಷಯದಲ್ಲಿಯೂ ಪ್ರಾರ್ಥಿಸಬೇಕೆಂಬುದು ದೇವರ ಬಯಕೆಯಾಗಿರುತ್ತದೆ (ಫಿಲಿಪ್ಪಿ 4:6). ಒಬ್ಬರು ಹೀಗೆ ಹೇಳಿರುವದು ಸರಿಯಾಗಿಯೇ ಇರುತ್ತದೆ, "ಯೋಚಿಸುವದು ಯೋಗ್ಯವಾಗಿರುವದಾದರೆ, ಪ್ರಾರ್ಥಿಸುವದೂ ಯೋಗ್ಯವಾದದ್ದಾಗಿದೆ." ಹೇಗೂ, ಪ್ರಕಟನೆ 8ನೇ ಅಧ್ಯಾಯದ ಮೊದಲ ಭಾಗದಲ್ಲಿ, ದೇವಜನರಿಂದ ಒಂದು ವಿಶೇಷ ವಿಧವಾದ ಪ್ರಾರ್ಥನೆಯು ಅರ್ಪಿಸಲ್ಪಡುವದು ಸ್ಪಷ್ಟವಾಗಿರುತ್ತದೆ - ಅದು "'ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀವು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ' ಎಂದು ಯಜ್ಞವೇದಿಯ ಕೆಳಗಿರುವವರು" ಮಾಡಿದ ಭಿನ್ನಹದಂತೆಯೇ ಇರುತ್ತದೆ (6:9, 10). ಈ ರೀತಿಯಲ್ಲಿ ಮುಕ್ತಾಯಕ್ಕೆ ಬರುವದು ಪ್ರಾರ್ಥನೆಗಳ ಬಳಿಕ ಏನು ಸಂಭವಿಸಿತು ಎಂಬುದರ ಮೇಲೆ ಆಧಾರವಾಗಿರುತ್ತದೆ. **ತರುವಾಯ ಆ ದೇವದೂತನು ಧೂಪಾರತಿಯನ್ನು ತೆಗೆದುಕೊಂಡು ಯಜ್ಞವೇದಿಯ ಮೇಲಿದ್ದ ಕೆಂಡಗಳಿಂದ ತುಂಬಿಸಿ ಭೂಮಿಗೆ ಬಿಸಾಡಿದನು.** ಭೂಮಿ ಎಂಬ ಪದಗುಚ್ಛವು ಪಶ್ಚಾತ್ತಾಪವಿಲ್ಲದ ಮಂಡಲವನ್ನು ಸೂಚಿಸುತ್ತದೆ (3:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರಕ್ತಸಾಕ್ಷಿಗಳು "*ಭೂನಿವಾಸಿಗಳು* ನಮ್ಮನ್ನು ಕೊಂದದ್ದಕ್ಕಾಗಿ ನೀವು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" ಎಂದು ಕೇಳಿದ್ದರು (ಒತ್ತಿ ಹೇಳಿದ್ದು ನನ್ನದು). ಯಜ್ಞವೇದಿಯ ಮೇಲಿನ ಕೆಂಡಗಳನ್ನು "ಭೂಮಿಯ" ಮೇಲೆ ಬಿಸಾಡುವದು ಕ್ರೈಸ್ತರನ್ನು ವಿರೋಧಿಸುವವರ ಮೇಲೆ ಪ್ರತೀಕಾರವನ್ನು ಮಾಡುವದಕ್ಕೆ ಸೂಚನೆಯಾಗಿದೆ. ದೃಶ್ಯವು ಯೆಹೆಜ್ಕೇಲನ ಪುಸ್ತಕದಲ್ಲಿರುವ ದೃಶ್ಯವೊಂದಕ್ಕೆ ಹೋಲಿಕೆಯಲ್ಲಿರುತ್ತದೆ, ಅಲ್ಲಿ ನಾರಿನ ಬಟ್ಟೆಯನ್ನು ಧರಿಸಿದ್ದ ಒಬ್ಬ ವ್ಯಕ್ತಿಗೆ ಕೆರೂಬಿಗಳ ಮಧ್ಯದೊಳಗಿಂದ ಬೊಗಸೆಯಲ್ಲಿ ಕೆಂಡಗಳನ್ನು ತೆಗೆದುಕೊಂಡು ಪಟ್ಟಣದ ಮೇಲೆ ಎರಚು ಎಂದು ಹೇಳಲಾಗುತ್ತದೆ (ಯೆಹೆಜ್ಕೇಲ 10:2). ಇಲ್ಲಿ ಬಳಸಲಾಗಿರುವ ಭಾಷೆಯು ನ್ಯಾಯತೀರ್ಪಿನ ಭಾಷೆಯಾಗಿದೆ.

ಕೆಂಡವು ಭೂಮಿಗೆ ಬಿದ್ದಾಗ, **ಗುಡುಗುಗಳೂ ವಾಣಿಗಳೂ ಮಿಂಚುಗಳೂ ಭೂಕಂಪಗಳೂ ಉಂಟಾದವು**. 4ನೇ ಅಧ್ಯಾಯದಲ್ಲಿ, "ಮಿಂಚುಗಳೂ ವಾಣಿಗಳೂ ಗುಡುಗುಗಳೂ" ದೇವರ ಸಿಂಹಾಸನದೊಳಗಿಂದ ಹೊರಡುತ್ತವೆ (4:5). 6ನೇ ಅಧ್ಯಾಯದಲ್ಲಿ, ಒಂದು ಭೂಕಂಪವು ಯಾವದನ್ನು ಜನರು ಕದಲಿಸಲಾಗದ್ದು ಎಂದು ಪರಿಗಣಿಸಿಕೊಳ್ಳುತ್ತಾರೋ ಅದನ್ನು ಅಲುಗಾಡಿಸುವದಕ್ಕೆ ಸಂಕೇತವಾಗಿರುತ್ತದೆ (6:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಪದಗಳು 5ನೇ ವಚನದಲ್ಲಿ ಒಂದುಗೂಡಿಸಲ್ಪಟ್ಟಿರುವದು ದೈವಿಕ ನ್ಯಾಯತೀರ್ಪಿನ ವಿಚಾರವನ್ನು ಪುನರ್ದೃಢೀಕರಿಸುತ್ತದೆ. ಅವಿಶ್ವಾಸಿಗಳಿಗೆ ದೇವರ ಎಚ್ಚರಿಕೆಯು ಸ್ಪಷ್ಟವಾಗಿತ್ತು: ನೀವು ನನ್ನ ಜನರಿಗೆ ಹಾನಿಯನ್ನು ಮಾಡುವದಾದರೆ, ನೀವು ನನಗೆ ಉತ್ತರವನ್ನು ಕೊಡಬೇಕಾಗುವದು.

ದೈವಿಕ ನ್ಯಾಯತೀರ್ಪಿನ ಕುರಿತಾದ 4 ಮತ್ತು 5 ವಚನಗಳ ಸಂದೇಶವು ಆದಿ ಕ್ರೈಸ್ತ

ವಾಚಕರಿಗೆ ಅತ್ಯಂಥ ಅವಶ್ಯಕವಾಗಿತ್ತು. "ಅವರ ವಿರುದ್ಧವಾಗಿ ಬೃಹತ್ ಹಿಂಸೆ ಮತ್ತು ಕುಚೋದ್ಯಗಳ ಯಂತ್ರಗಳನ್ನು ಅವರನ್ನು ಗುರಿಯಿಟ್ಟು ನಿಲ್ಲಿಸಲಾಗಿತ್ತು. ಅವರ ಬಳಿಯಲ್ಲಿ ಆಯುಧಗಳಾಗಲಿ ಮತಗಳಾಗಿ ಇರಲಿಲ್ಲ. ಅವರಲ್ಲಿ ಸ್ವಲ್ಪ ಹಣವಿತ್ತು ಮತ್ತು ಅಂತಸ್ತು ಇರಲಿಲ್ಲ."[15] ಕನಿಷ್ಠ ಅವರಲ್ಲಿ ಕೆಲವರು ಹೀಗೆ ಕೇಳುತ್ತಿದ್ದಿರಬೇಕು, "ರೋಮನ್ ಸಾಮ್ರಾಜ್ಯದ ಶಕ್ತಿಯ ಮುಂದೆ ನಾವು ಏನು ಮಾಡುವದಕ್ಕೆ ಸಾಧ್ಯ?" ಪ್ರಕಟನೆ 8ನೇ ಅಧ್ಯಾಯದ ಉತ್ತರವು "ಪ್ರಾರ್ಥಿಸಿರಿ!" ಎಂದಾಗಿತ್ತು. Thomas Torranceನು ಈ ಯೋಚನೆ ಮಾಡುವಂತೆ ಪ್ರೇರಿಸುವ ಮಾತುಗಳನ್ನು ಬರೆದನು:

> ಲೋಕದ ಹಿಂದಿರುವ ನಿಜವಾದ ಪ್ರಮುಖ-ಶಕ್ತಿಗಳು ಯಾವವು ಮತ್ತು ನಮ್ಮ ಗಮ್ಯತೆಯ ಆಳವಾದ ರಹಸ್ಯಗಳು ಯಾವವು? ಆಶ್ಚರ್ಯಚಕಿತಗೊಳಿಸುವಂಥ ಉತ್ತರವು ಇಲ್ಲಿದೆ: ದೇವಜನರ ಪ್ರಾರ್ಥನೆಗಳು ಮತ್ತು ದೇವರ ಅಗ್ನಿ . . . ಲೋಕದಲ್ಲಿ ತಾಂಡವವಾಡುತ್ತಿರುವ ಅಂಧಕಾರದ ಮತ್ತು ಪರಾಕ್ರಮಿ ಶಕ್ತಿಗಳಿಗಿಂದತಲೂ ಹೆಚ್ಚು ಸಾಮರ್ಥ್ಯವುಳ್ಳದ್ದು, ಬೇರೆ ಯಾವದಕ್ಕಿಂತಲೂ ಅಧಿಕ ಶಕ್ತಿಶಾಲಿ ಎಂದರೆ ದೇವರ ಕೆಂಡದಿಂದ ಉರಿಸಲ್ಪಟ್ಟು ಭೂಮಿಯ ಮೇಲೆ ಹಾಕಲ್ಪಡುವಂಥ ಪ್ರಾರ್ಥನೆಯ ಶಕ್ತಿಯೇ ಆಗಿದೆ . . .
>
> . . . ದೇವಜನರ ಪ್ರಾರ್ಥನೆಗಳು ಮತ್ತು ದೇವರ ಬೆಂಕಿ ಇವೆರಡೂ ಲೋಕದ ಇಡೀ ಗತಿಯನ್ನೇ ಬದಲಿಸುತ್ತವೆ. ಅವುಗಳು ಲೋಕವು ತಿಳಿದಿರುವಂತಹ ಅತ್ಯಂಥ ಸಾಮರ್ಥ್ಯವುಳ್ಳವುಗಳು, ಅತ್ಯಂಥ ಕ್ಷೋಭೆಕರ, ಅತ್ಯಂಥ ಕ್ರಾಂತಿಕಾರಿ, ಅತಿ ಭಯಾನಕ ಶಕ್ತಿಗಳಾಗಿವೆ. ಕ್ರಿಸ್ತನ ಸಭೆಯಲ್ಲಿರುವ ನಾವು ನಿಜವಾಗಿಯೂ ಆ ವಿಧವಾಗಿ ಪ್ರಾರ್ಥನೆಯ ಶಕ್ತಿಯನ್ನು ಅರ್ಥಮಾಡಿಕೊಂಡಿದ್ದೇವೋ! . . .[16]

**ವಚನ 6.** ಭೂಕಂಪಗಳು ಮತ್ತು ಮಿಂಚುಗಳು ಏಳು ತುತೂರಿಗಳು ಊದಲ್ಪಡುವಿಕೆಗೆ ದಾರಿ ಮಾಡುತ್ತವೆ: **ಏಳು ತುತೂರಿಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರು ತುತೂರಿಗಳನ್ನೂದುವದಕ್ಕೆ ಸಿದ್ಧ ಮಾಡಿಕೊಂಡಿದ್ದರು**.

ಸಿನಾಯ್ ಪರ್ವತದ ಮೇಲೆ ಧರ್ಮಶಾಸ್ತ್ರವು ಕೊಡಲ್ಪಟ್ಟಾಗ, ಜನರು ತುತೂರಿಯ ಶಬ್ದವನ್ನು ಕೇಳಿದರು (ವಿಮೋಚನಕಾಂಡ 19:16–19). ಮೋಶೆಯು ಎರಡು ಬೆಳ್ಳಿಯ ತುತೂರಿಗಳನ್ನು ಮಾಡಿದನು, ಜನರನ್ನು ಒಟ್ಟುಗೂಡಿಸುವದಕ್ಕಾಗಿ, ಎಚ್ಚರಿಕೆಗಳನ್ನು ಕೊಡುವದಕ್ಕಾಗಿ, ಮತ್ತು ವಿಶೇಷ ಸಂದರ್ಭಗಳನ್ನು ಸಾರುವದಕ್ಕಾಗಿ ಬಳಸಲಾಗುತ್ತಿತ್ತು (ಅರಣ್ಯಕಾಂಡ 10:1–10). ಅಂತಿಮವಾಗಿ, ಕರ್ತನ ದಿನದ – ಕರ್ತನು ನ್ಯಾಯತೀರ್ಪು ಮಾಡುವವನಾಗಿ ಬರುವದರ – ಭಾವನೆಯಲ್ಲಿ ತುತೂರಿಯ ಘೋಷವು ಒಂದು ಅಂತರ್ಗತ ಭಾಗವಾಯಿತು (ಯೆಶಾಯ 27:13; ಯೋವೇಲ 2:1; ಚೆಫನ್ಯ 1:16; ಜೆಕರ್ಯ 9:14; ಮತ್ತಾಯ 24:31). ಅನೇಕರು ಕರ್ತನ ಅಂತಿಮ ದಿನದ ಕುರಿತು ಯೋಚಿಸುವಾಗ, ಅವರು "ಕಡೇ ತುತೂರಿಯು ಊದಲ್ಪಡುವ" ಕುರಿತು ಯೋಚಿಸುತ್ತಾರೆ (1 ಕೊರಿಂಥ 15:52; KJV; ನೋಡಿರಿ 1 ಥೆಸಲೋನಿಕ 4:16).

ತುತೂರಿಯ ಪ್ರಾಥಮಿಕ ಉದ್ದೇಶವು ಜನರ ಗಮನವನ್ನು ಸೆಳೆಯುವದಾಗಿತ್ತು. ಅನೇಕರು ಅದನ್ನು ಒಂದು ಮಹತ್ವದ ಘಟನೆ ಅಥವಾ ಒಬ್ಬ ಪ್ರಾಮುಖ್ಯ ವ್ಯಕ್ತಿಯ ಆಗಮನವನ್ನು ಘೋಷಿಸುವ ಸಡಗರದೊಂದಿಗೆ ಸಂಬಂಧಗೊಳಿಸುತ್ತಾರೆ. ಏಳು ತುತೂರಿಗಳ ವಿಷಯದಲ್ಲಿ ನಾವು ಅಧ್ಯಯನ ಮಾಡಲಿರುವ ವೇಳೆ, ಅವುಗಳು ಪುಸ್ತಕದ ಚಿತ್ರಣಗಳ ಒಂದು ಭಾಗವಷ್ಟೆ ಆಗಿರುತ್ತವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಕ್ರೈಸ್ತೀಯ ಆರಾಧನೆಯಲ್ಲಿ ಧೂಪದ ಬಳಕೆಯು ಹೇಗೆ ನ್ಯಾಯವೆಂದು ಸಮರ್ಥಿಸಲ್ಪಡಲಾಗುವದಿಲ್ಲವೋ ಅದೇ ರೀತಿಯಲ್ಲಿ

ತುತೂರಿಯ ಸಾಂಕೇತಿಕತೆಯು ಅವುಗಳನ್ನು ಇಂದು ಕ್ರೈಸ್ತೀಯ ಆರಾಧನೆಗಳಲ್ಲಿ ಬಳಸುವದನ್ನು ಸಹ ಸಮರ್ಥಿಸುವದಕ್ಕೆ ಸಾಧ್ಯವಿಲ್ಲ (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪ್ರಕಟನೆ 8ರಿಂದ 11 ರಲ್ಲಿ, ತುತೂರಿಗಳು ಎರಡು ವಿಶೇಷವಾದ ಉದ್ದೇಶಗಳನ್ನು ನೆರವೇರಿಸುತ್ತವೆ. ಮೊದಲನೆಯದ್ದು ದೇವರ ಜನರಿಗೆ *ಜಯವನ್ನು ಘೋಷಿಸುವದು*. ದೇವಜನರ ಪ್ರಾರ್ಥನೆಗಳಿಗೆ ಉತ್ತರವಾಗಿ ತುತೂರಿಗಳು ಊದಲ್ಪಟ್ಟವು, ಮತ್ತು ಭೂಮಿಯ ಮೇಲೆ ಕೆಂಡಗಳು ಬಿಸಾಡಲ್ಪಡುವದಕ್ಕೆ ಮುನ್ನಡೆಯಾಗಿದ್ದವು (8:3, 5). ಕ್ರೈಸ್ತರಿಗೂ ಕ್ರೈಸ್ತೇತರರಿಗೂ ಪರಿಣಾಮ ಬೀರಿದ ಏಳು ಮುದ್ರೆಗಳಂತಲ್ಲದೆ (ನೋಡಿರಿ 6:9-11), ಈ ಏಳು ತುತೂರಿಗಳ ಕ್ರಿಯೆಯು "ಭೂಮಿಯ ಮೇಲೆ" ಬಿದ್ದಿತು (8:5, 7) - ಅಂದರೆ, "ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರ" ಮೇಲೆ ಮಾತ್ರವೇ (9:4). ಪ್ರಥಮ ಶತಮಾನದ ಕ್ರೈಸ್ತರು ಏಳು ತುತೂರಿಗಳ ಕುರಿತು ಓದಿದಾಗ, ಬಹುಶಃ ಅವರು ಯೆರಿಕೋವಿನಲ್ಲಿ ದೊರೆತ ಜಯದಲ್ಲಿ ಬಳಸಲಾದ ಏಳು ತುತೂರಿಗಳ ಕುರಿತು ಯೋಚಿಸಿರಬಹುದಾಗಿದೆ (ಯೆಹೋಶುವ 6:4, 5, 20).

ಪ್ರಕಟನೆ 8ರಿಂದ 11 ಅಧ್ಯಾಗಳಲ್ಲಿರುವ ಏಳು ತುತೂರಿಗಳ ಎರಡನೆಯ ಉದ್ದೇಶವು ಪಶ್ಚಾತ್ತಾಪವಿಲ್ಲದವರಿಗೆ *ಎಚ್ಚರಿಕೆ* ಕೊಡುವದಕ್ಕಾಗಿ ಆಗಿತ್ತು. ಎಚ್ಚರಿಸುವದಕ್ಕಾಗಿ ತುತೂರಿಗಳು ಬಳಸಲ್ಪಟ್ಟವು ಎಂಬುದಕ್ಕೆ ಬೈಬಲಿನ ಉದಾಹರಣೆಗಳನ್ನು ಯೆಹೆಜ್ಕೇಲ 33ರಲ್ಲಿ ಕಾಣಬಹುದಾಗಿದೆ. ಬೈಬಲ್ ಕಾಲಗಳಲ್ಲಿ, ಪಟ್ಟಣಗಳಿಗೆ ಕಾವಲುಗಾರರು ಇದ್ದು ಅವರು ಗೋಡೆಗಳನ್ನು ಕಾಯುತ್ತಿದ್ದರು. ವೈರಿಗಳು ಬರುವದನ್ನು ಕಾವಲುಗಾರನು ಕಂಡರೆ, ಆತನು ಪಟ್ಟಣದೊಳಗಿರುವವರನ್ನು ಎಚ್ಚರಿಸುವದಕ್ಕೆ ತುತೂರಿಯನ್ನು ಊದಬೇಕಾಗಿತ್ತು. ಆತನು ತುತೂರಿಯನ್ನು ಊದಿಯೂ ಅವರು ಆತನ ಎಚ್ಚರಿಕೆಯನ್ನು ನಿರ್ಲಕ್ಷಿಸಿದ್ದಾದರೆ, ಅವರ ರಕ್ತಕ್ಕೆ ಅವರೇ ಹೊಣೆಯಾಗುತ್ತಿದ್ದರು. ಇನ್ನೊಂದೆಡೆಯಲ್ಲಿ, ಆತನು ತುತೂರಿಯನ್ನು ಊದುವದಕ್ಕೆ ವಿಫಲನಾಗಿದ್ದಲ್ಲಿ, ದೇವರು ಆತನನ್ನೇ ಅವರ ಮರಣಗಳಿಗೆ ಹೊಣೆಗಾರನನ್ನಾಗಿಸುತ್ತಿದ್ದನು (ಯೆಹೆಜ್ಕೇಲ 33:1-6). ಕಾವಲುಗಾರನ ಚಿತ್ರಣವು ದೇವರ ಒಬ್ಬ ಪ್ರವಾದಿಯಾಗಿ ಯೆಹೆಜ್ಕೇಲನಿಗಿದ್ದ ಜವಾಬ್ದಾರಿಗಳಿಗೆ ರೂಪಕವಾಗಿ ಬಳಸಲ್ಪಟ್ಟಿರುತ್ತದೆ: ಯೆಹೆಜ್ಕೇಲನು "ಇಸ್ರಾಯೇಲ್ ವಂಶದವರಿಗೆ ಕಾವಲುಗಾರ" ಆಗಿರಬೇಕಿತ್ತು, ಅವರನ್ನು ತಮ್ಮ ದುರ್ಮಾರ್ಗಗಳನ್ನು ಬಿಟ್ಟು ತಿರುಗಿಕೊಳ್ಳುವಂತೆ ಎಚ್ಚರಿಸಬೇಕಾಗಿತ್ತು (ಯೆಹೆಜ್ಕೇಲ 33:7-9). ಅದೇ ರೀತಿಯಲ್ಲಿಯೇ, ಪ್ರಕಟನೆ 8ರಿಂದ 11 ಅಧ್ಯಾಯಗಳಲ್ಲಿ, ಜನರನ್ನು ಶಾರೀರಿಕ ಅಪಾಯದ ಕುರಿತಾಗಿ ಅಲ್ಲ, ಆದರೆ ಬದಲಾಗಿ ಆತ್ಮೀಕ ಅಪಾಯದ ಕುರಿತು ಎಚ್ಚರಿಸುವದರ ಮೇಲೆ ಒತ್ತು ಕೊಡಲಾಗಿರುತ್ತದೆ.

ಪ್ರಕಟನೆ ಪುಸ್ತಕಗಳಲ್ಲಿ ತುತೂರಿಗಳ ಪ್ರಾಥಮಿಕ ಉದ್ದೇಶವು ಎಚ್ಚರಿಸುವದೇ ಆಗಿತ್ತದೆಂಬುದು ಹಲವಾರು ದಾರಿಗಳಲ್ಲಿ ಸೂಚಿಸಲ್ಪಟ್ಟಿರುತ್ತದೆ. ಮೊದಲನೆಯದ್ದೆಂದರೆ ತುತೂರಿಗಳ ಮೂಲಕ ಸೂಚಿತವಾಗಿರುವ ಕ್ರಿಯೆಯ ವ್ಯಾಪಕತೆ. "ಮೂರರಲ್ಲಿ ಒಂದು ಭಾಗ" ಎಂಬ ಪದಗುಚ್ಛವು 8:7-12 ರಲ್ಲಿ ಹನ್ನೆರಡು ಸಾರಿ ಕಂಡು ಬರುತ್ತದೆ (ನೋಡಿರಿ 9:15, 18). ಪ್ರಕಟನೆ ಪುಸ್ತಕದಲ್ಲಿ ವಿಭಾಗಗೊಳಿಸುವಿಕೆಗಳ ಮೂಲಭೂತ ಅರ್ಥವು ಏನೆಂದರೆ "ಒಟ್ಟಾರೆಯಾಗಿ ಅಲ್ಲ, ಆದರೆ ಒಂದು ಭಾಗ" ಎಂಬುದಾಗಿರುತ್ತದೆ. Homer Haileyನು ಗಮನಕ್ಕೆ ತರುವದೇನೆಂದರೆ, "'ಮೂರರಲ್ಲಿ ಒಂದು ಭಾಗ' ಎಂಬುದು ಒಂದು ಬೃಹತ್ ಭಾಗ ಎಂಬುದನ್ನು ಸೂಚಿಸುತ್ತದೆ, ಆದರೆ ಸಂಪೂರ್ಣ ನಾಶನವಲ್ಲ; ಜೀವದ ಸಾಧ್ಯತೆಯು ಈಗಲೂ

ಇರುವದಾಗಿದೆ."[17] ಮುದ್ರೆಗಳು ಒಡೆಯಲ್ಪಡುತ್ತಿರುವ ವೇಳೆ, ಬೂದಿ ಬಣ್ಣದ ಕುದುರೆಯ ಮೇಲಿನ ಸವಾರನೊಬ್ಬನಿಗೆ "ಭೂಮಿಯ ಕಾಲುಭಾಗದಲ್ಲಿ" ಮರಣವನ್ನುಂಟು ಮಾಡುವದಕ್ಕೆ ಅನುಮತಿ ಕೊಡಲಾಯಿತು (6:8). *ಮೂರರಲ್ಲಿ ಒಂದು ಭಾಗ* ಎಂದರೆ *ಕಾಲುಭಾಗ*ಕ್ಕಿಂತ ಅಧಿಕತೆಯನ್ನು ಹೊಂದಿದೆ. ನ್ಯಾಯತೀರ್ಪು ಭಾಗಶಃ ಆಗಿತ್ತಾದ್ದರಿಂದ, ಇಲ್ಲಿ ದಂಡನೆಯನ್ನು ಮಾಡುವದೊಂದೇ ಏಕೈಕ ಲಕ್ಷ್ಯ ಆಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಎರಡನೆಯದಾಗಿ, ಎಚ್ಚರಿಕೆಯ ಉದ್ದೇಶವು ಆರನೆಯ ತುತೂರಿಯಿಂದಾಗುವ ಕ್ರಿಯೆಯ ನಂತರದಲ್ಲಾಗುವ ಪ್ರೇರಿತ ಹೇಳಿಕೆಯಲ್ಲಿ ಸೂಚಿಸಲ್ಪಟ್ಟಿರುತ್ತದೆ:

> ಉಪದ್ರವಗಳಿಂದ ಸಾಯದೆ ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು *ದೇವರ ಕಡೆಗೆ ತಿರುಗಲಿಲ್ಲ*; ಅವರು ದೆವ್ವಗಳ ಪೂಜೆಯನ್ನೂ ಬಂಗಾರ ಬೆಳ್ಳಿ ತಾಮ್ರ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟ ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ. ಇದಲ್ಲದೆ ತಾವು ನಡಿಸುತ್ತಿದ್ದ ಕೊಲೆ ಮಾಟ ಜಾರತ್ವ ಕಳ್ಳತನ ಇವುಗಳೊಳಗೆ ಒಂದನ್ನೂ ಬಿಟ್ಟು *ಮಾನಸಾಂತರಮಾಡಿಕೊಳ್ಳಲಿಲ್ಲ* (9:20, 21; ಒತ್ತಿ ಹೇಳಿದ್ದು ನನ್ನದು)

"ಮಾನಸಾಂತರಮಾಡಿಕೊಳ್ಳಲಿಲ್ಲ" ಎಂಬ ವಾಸ್ತವಾಂಶದ ಮೇಲೆ ಒತ್ತು ಕೊಡಲ್ಪಟ್ಟಿರುವದು ಸೂಚಿಸುವದೇನೆಂದರೆ ತುತೂರಿಯ ಒಂದು ಲಕ್ಷ್ಯವು ಭಕ್ತಿಹೀನ ಮನುಷ್ಯರನ್ನು ಪಶ್ಚಾತ್ತಾಪಪಡುವಂತೆ ಪ್ರೋತ್ಸಾಹಿಸುವದಾಗಿತ್ತು. George Laddನು ಮುಕ್ತಾಯಕ್ಕೆ ಬರುವದೇನೆಂದರೆ ದೇವರ ನ್ಯಾಯತೀರ್ಪುಗಳು "ಮನುಷ್ಯರನ್ನು ತೀರ್ಮಾನ ಮಾಡುವದಕ್ಕೆ ಇನ್ನೂ ಸಮಯಾವಕಾಶವು ಇರುವ ವೇಳೆ ತಡವಾಗಿ ಹೋಗುವದರೊಳಗಾಗಿ ಕಠೋರವಾದ ಅನುಭವಗಳ ಮೂಲಕವಾಗಿ ಅವರ ಮೊಣಕಾಲುಗಳ ಮೇಲೆ ಬೀಳುವಂತೆ ನಡಿಸುವದೇ ಆಗಿತ್ತು."[18] ದೇವರ ತಕ್ಷಣದ ಉದ್ದೇಶವು ನಾಶಮಾಡುವದು ಆಗಿರಲಿಲ್ಲ, ಆದರೆ ಶಿಕ್ಷಿಸುವದು ಆಗಿತ್ತು. ಆತನು ದಂಡಿಸುವ ಕುರಿತು ಚಿಂತೆಯನ್ನು ಹೊಂದಿದ್ದಷ್ಟೇ ಪಶ್ಚಾತ್ತಾಪಕ್ಕೆ ನಡಿಸುವದರಲ್ಲಿ ಸಹ ಚಿಂತೆಯನ್ನು ಹೊಂದಿದ್ದನು. G. B. Cairdನು ಹೀಗೆ ಬರೆಯುತ್ತಾನೆ,

> [ತುತೂರಿಗಳಿಂದ ಘೋಷಿಸಲ್ಪಟ್ಟ ಉಪದ್ರವಗಳು] ಮಾನವ ಪಾಪದ ಮೇಲೆ ದೇವರ ನ್ಯಾಯತೀರ್ಪು ಆಗಿರುತ್ತವೆ, ಆದರೆ ಆತನ ಅಂತಿಮ ನ್ಯಾಯತೀರ್ಪು ಅಲ್ಲ. ಅವುಗಳ ಉದ್ದೇಶವು ಮನುಷ್ಯರನ್ನು ಪಶ್ಚಾತ್ತಾಪಕ್ಕೆ ನಡಿಸುವದಾಗಿತ್ತು. ಏಳನೆಯ ತುತೂರಿಯನ್ನು ಊದುವ ದೇವದೂತನು ಈಗ ದೇವರು ಸಾರ್ವಭೌಮ ರಾಜ್ಯಾಧಿಕಾರವನ್ನು ವಹಿಸಿಕೊಂಡಿದ್ದಾನೆ ಮತ್ತು ತನ್ನ ಆಳ್ವಿಕೆಯನ್ನು ಆರಂಭಿಸಿದ್ದು ಅದರಲ್ಲಿ ಅಶುದ್ಧವಾದದ್ದೆಲ್ಲವು ಸದಾಕಾಲಕ್ಕೂ ಹೊರಗಿಡಲ್ಪಡುವದೆಂದು ಸಾರಿದಾಗ ಮಾತ್ರವೇ, ಆಗ ಮಾತ್ರವೇ ಪಶ್ಚಾತ್ತಾಪಕ್ಕೆ ತೆರೆಯಲ್ಪಟ್ಟಿದ್ದ ಬಾಗಿಲು ಮುಚ್ಚಲ್ಪಡತಕ್ಕದ್ದು. ಅದು "ಲೋಕನಾಶಕರನ್ನು ನಾಶಮಾಡುವ" ಸಮಯವಾಗುವದು [11:18], ಆಗ ಗುಣಸ್ವಭಾವನ್ನು ಇನ್ನು ಮೇಲೆ ಯಾವದೇ ರೀತಿಯಲ್ಲಿ ಬದಲಾಯಿಸಿಕೊಳ್ಳುವದಕ್ಕೆ ಬಹಳ ತಡವಾಗಿ ಹೋಗಿರುವದು . . . [22:11]. ಆದರೆ ಅಲ್ಲಿಯ ತನಕ ಪರಲೋಕದ ತುತೂರಿಯು ಶಬ್ದಮಾಡುವದನ್ನು ನಿಲ್ಲಿಸುವದಿಲ್ಲ.[19]

ಕ್ರೈಸ್ತರನ್ನು ಹಿಂಸಿಸಿದವರ ಗುಣಸ್ವಭಾವಗಳನ್ನು ಪರಿಗಣಿಸುವದಾದರೆ, ದೇವರು ಪಶ್ಚಾತ್ತಾಪ ಪಡುವಂತೆ ಅವರಿಗೆ ಇನ್ನೊಂದು ಅವಕಾಶವನ್ನು ಕೊಟ್ಟನೆಂಬುದು ಆಶ್ಚರ್ಯಕರವಾಗಿರುತ್ತದೆ ಹೇಗೂ, ಈ ಪುಸ್ತಕದಲ್ಲಿ ಈ ಮುಂಚಿನ ಸಮಯದಲ್ಲಿ ದೇವರು

ಯೆಜೆಬೇಲಳಿಗೆ “ದೇವರ ಕಡೆಗೆ ತಿರುಗಿಕೊಳ್ಳುವ . . . ಸಮಯವನ್ನು” ಕೊಟ್ಟಿದ್ದನು (2:21). ದೇವರು ನಿರಂತರವಾಗಿ “ಕೋಪಿಸಿಕೊಳ್ಳುವದರಲ್ಲಿ ನಿಧಾನ” (ಯಾಕೋಬ 1:19; KJV) ಎಂದರೆ ಹೇಗಿರುತ್ತದೆಂಬುದನ್ನು ತೋರ್ಪಡಿಸುತ್ತಲೇ ಇರುತ್ತಾನೆ. ಎಲ್ಲಾ ಮನುಷ್ಯರ ವಿಷಯದಲ್ಲಿ ಅಷ್ಟೊಂದು ತಾಳ್ಮೆಯಿಂದಿರುವದಕ್ಕಾಗಿ ಕರ್ತನು ಸ್ತೋತ್ರಕ್ಕೆ ಯೋಗ್ಯನಾಗಿದ್ದಾನೆ (ರೋಮಾ 2:4; 9:22; 1 ತಿಮೊಥೆ 1:16; 1 ಪೇತ್ರ 3:20; 2 ಪೇತ್ರ 3:9, 15).

## ಮೊದಲ ನಾಲ್ಕು ತುತೂರಿಗಳು (8:7-12)

ಮೊದಲ ನಾಲ್ಕು ತುತೂರಿಗಳು ನಿಕಟವಾಗಿ ಸಂಬಂಧ ಹೊಂದಿವೆ, ಅದೇ ರೀತಿ ಮೊದಲ ನಾಲ್ಕು ಮುದ್ರೆಗಳೂ ಇದ್ದವು. ಮೊದಲ ನಾಲ್ಕು ತುತೂರಿಗಳು ಮನುಷ್ಯರನ್ನು ಪರೋಕ್ಷವಾಗಿ ತಾಕುತ್ತವೆ - ಇವುಗಳು ಮನುಷ್ಯರನ್ನು ನೇರವಾಗಿ ಬಾಧಿಸಿದ ಕಡೇ ಮೂರು ತುತೂರಿಗಳಿಗೆ ತದ್ವಿರುದ್ಧವಾಗಿರುತ್ತವೆ (ನೋಡಿರಿ 9:3, 4). ಮೊದಲ ನಾಲ್ಕು ತುತೂರಿಗಳಲ್ಲಿ ಪ್ರತಿಯೊಂದು ತುತೂರಿಯು ಪ್ರಾಕೃತ ಲೋಕದ ಯಾವದೋ ಒಂದು ಭಾಗವನ್ನು ಹಾನಿ ಮಾಡಿತು. ಆ ದಿನದಲ್ಲಿ, ಮನುಷ್ಯರು ಪ್ರಕೃತಿಯನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸುವರು: ಭೂಮಿ, ಸಮುದ್ರ, ನೀರಿನ ಒರತೆಗಳು, ಮತ್ತು ಆಕಾಶಕಾಯಗಳು.[20] ಮೊದಲ ನಾಲ್ಕು ತುತೂರಿಗಳು ಊದಲ್ಪಟ್ಟಾಗ, ಈ ಎಲ್ಲಾ ನಾಲ್ಕು ವಿಭಾಗಗಳಿಗೆ ಹಾನಿ ಸಂಭವಿಸಿತು.

ಮೊದಲ ನಾಲ್ಕು ತುತೂರಿಗಳ ವೇಳೆಯಲ್ಲಿ ಭೂಮಿಯ ಮೇಲೆ ನುಗ್ಗಿ ಬರುವ ವಿನಾಶಕಾರಿ ಶಕ್ತಿಗಳು ಐಗುಪ್ತ್ಯದೇಶದ ಮೇಲೆ ಬಂದ ಹತ್ತು ಉಪದ್ರವಗಳನ್ನು ನೆನಪಿಸುತ್ತವೆ - ವಿಶೇಷವಾಗಿ ಮೊದಲನೆಯದು (ನೀರು ರಕ್ತವಾಗಿ ಮಾರ್ಪಡುವದು), ಏಳನೆಯದು (ಆಣೆಕಲ್ಲು ಮತ್ತು ಅಗ್ನಿಗಳು ಪರಲೋಕದಿಂದ ಬಿದ್ದಿದ್ದು), ಮತ್ತು ಒಂಭತ್ತನೆಯದು (ಭೂಮಿಯ ಮೇಲೆ ಕತ್ತಲು ಕವಿಯುವದು) (ವಿಮೋಚನಕಾಂಡ 7:20, 21; 9:23-25; 10:21-23). ಇವುಗಳ ಜೊತೆಯಲ್ಲಿ, ಐದನೆಯ ತುತೂರಿಯು ಮಿಡತೆಗಳ ಉಪದ್ರವದ ರೀತಿಯಲ್ಲಿಯೇ ಇರುತ್ತದೆ (ವಿಮೋಚನಕಾಂಡ 10:1-20). ಈ ಹೋಲಿಕೆಗಳು ನಿಶ್ಚಯವಾಗಿಯೂ ಕಾಕತಾಳೀಯವಾಗಿರುವದಿಲ್ಲ. ದೇವರ ಜನರು ಹಾಗೂ ಸಮಾಜದ ನಡುವಿನ ಮೊದಲ ಕಾದಾಟವು ಐಗುಪ್ತ್ಯದೇಶದಲ್ಲಿ ಆಗಿತ್ತು, ಮತ್ತು ಐಗುಪ್ತ್ಯದೇಶವು ಒಳ್ಳೇದು ಹಾಗೂ ಕೆಟ್ಟದ್ದರ ನಡುವಿನ ಹೋರಾಟಕ್ಕೆ ಒಂದು ಮೂಲಮಾದರಿಯಂತಾಯಿತು (ನೋಡಿರಿ 11:8).

ದೇವರು ಹತ್ತು ಉಪದ್ರವಗಳನ್ನು ಕಳುಹಿಸುವದರಲ್ಲಿನ ಉದ್ದೇಶ ಮತ್ತು ಏಳು ತುತೂರಿಗಳ ವಿಷಯದಲ್ಲಿ ಆತನಿಗಿರುವ ಉದ್ದೇಶದ ನಡುವೆ ಒಂದು ಸಮಾನಾರ್ಥವನ್ನು ಕಲ್ಪಿಸಬಹುದಾಗಿದೆ: ಒಂದು ಅರ್ಥದಲ್ಲಿ, ಉಪದ್ರವಗಳು ಇಸ್ರಾಯೇಲ್ಯರನ್ನು ಕೆಟ್ಟದ್ದಾಗಿ ನಡಿಸಿಕೊಂಡದ್ದಕ್ಕಾಗಿ ಐಗುಪ್ತ್ಯರನ್ನು ದಂಡಿಸಿದವು, ಆದರೆ ಅವುಗಳ ಪ್ರಾಥಮಿಕ ಉದ್ದೇಶವು ಇಸ್ರಾಯೇಲ್ಯರನ್ನು ಹೋಗುವಂತೆ ಬಿಡುವ ಹಾಗೆ ಫರೋಹನಲ್ಲಿ ಮನವರಿಕೆಯನ್ನುಂಟು ಮಾಡುವದೇ ಆಗಿತ್ತು. Petersonನು ಹೀಗೆ ಬರೆದನು, “ವಿಮೋಚನಕಾಂಡದ ಉಪದ್ರವಗಳು ದಂಡನಾತ್ಮಕವಾಗಿರಲಿಲ್ಲ ಆದರೆ ಶುದ್ಧೀಕಾರಕವಾಗಿದ್ದವು, ಫರೋಹನ ಜೀವಿತವನ್ನು ದುರ್ಗತಿಗೆ ತರುವದಕ್ಕಾಗಿ ಅಷ್ಟೇ ಆಗಿರದೆ, ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವಂತೆ ಮಾಡುವದಕ್ಕೆ, ಪಶ್ಚಾತ್ತಾಪಕ್ಕೆ ನಡಿಸುವದು ಆಗಿತ್ತು.”[21] ಅದೇ ರೀತಿಯಲ್ಲಿಯೇ, ತುತೂರಿಗಳ ಉದ್ದೇಶವು ಪಾಪಿಗಳನ್ನು ಪಶ್ಚಾತ್ತಾಪ ಪಡುವಂತೆ ಪ್ರೇರಿಸುವದೇ ಆಗಿತ್ತು. ಖಂಡಿತವಾಗಿಯೂ, ಫರೋಹನು ಪಶ್ಚಾತ್ತಾಪ ಪಡಲಿಲ್ಲ. ಯೋಹಾನನ ದಿನದ ಬಹುಪಾಲು ಪಾಪಿಗಳು ಸಹ ಪಶ್ಚಾತ್ತಾಪ ಪಡುವವರಲ್ಲ, ಅದೇ

ರೀತಿಯಲ್ಲಿಯೇ ಇಂದಿನ ಬಹಳಷ್ಟು ಪಾಪಿಗಳೂ ಪಶ್ಚಾತ್ತಾಪ ಪಡುವದಿಲ್ಲ.

ಹೇಗೂ, ಪ್ರಕಟನೆ ಪುಸ್ತಕವು ಐಗುಪ್ತ್ಯದಲ್ಲಿ ಸಂಭವಿಸಿದ ಹತ್ತು ಉಪದ್ರವಗಳನ್ನು ಕೇವಲ ನಕಲು ಮಾಡುವದಿಲ್ಲ. ಕೆಲವು ಮಾತ್ರವೇ ಬಳಸಲ್ಪಟ್ಟಿದ್ದು ಅವುಗಳನ್ನು ಬೇರೆ ರೀತಿಯಲ್ಲಿ ನಿರ್ವಹಿಸಲಾಗಿರುತ್ತದೆ. ಉಪದ್ರವಗಳಿಂದ ಕೆಲವೊಂದು ಸಾಮಾನ್ಯವಾದ ಮುಕ್ತಾಯಕ್ಕೆ ಬರಬಹುದಾಗಿದ್ದರೂ, ಪ್ರಕಟನೆ ಪುಸ್ತಕದಲ್ಲಿರುವ ಸಾಂಕೇತಿಕತೆಯು ಭಿನ್ನವಾಗಿರುತ್ತದೆಂಬುದನ್ನು ತೋರಿಸುವದಕ್ಕೆ ಘಟನೆಗಳಲ್ಲಿ ಬದಲಾವಣೆಗಳನ್ನು ಮಾಡಲಾಗಿರುತ್ತದೆ.

## ಮೊದಲನೆಯ ತುತೂರಿ (8:7)

**[7]ಮೊದಲನೆಯ ದೇವದೂತನು ತುತೂರಿಯನ್ನೂದಿದಾಗ ರಕ್ತದಲ್ಲಿ ಕಲಸಿದ ಆನೆಕಲ್ಲಿನ ಮಳೆಯೂ ಬೆಂಕಿಯೂ ಭೂಮಿಗೆ ಸುರಿಸಲ್ಪಟ್ಟವು; ಭೂಮಿಯೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು; ಮರಗಳೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು; ಹಸರು ಹುಲ್ಲೆಲ್ಲಾ ಸುಟ್ಟುಹೋಯಿತು.**

**ವಚನ 7.** ಮೊದಲನೆಯ ತುತೂರಿಯು **ಭೂಮಿಯ** ಮೇಲೆ ನಾಶನವನ್ನು ಘೋಷಿಸಿತ್ತು. **ಆನೆಕಲ್ಲಿನ ಮಳೆಯೂ ಬೆಂಕಿಯೂ** ಸಾಂಕೇತಿಕತೆಯು ದೈವಿಕ ನ್ಯಾಯತೀರ್ಪು ಆಗಿರುತ್ತದೆಂಬುದು ಹಳೆಯ ಒಡಂಬಡಿಕೆಯಲ್ಲಿ ಕಂಡು ಬರುತ್ತದೆ (ನೋಡಿರಿ ಯೋಬ 38:22, 23; ಯೆಶಾಯ 28:2, 17; 30:30, 31).

ಮೊದಲನೆಯ ತುತೂರಿಯು ಏಳನೆಯ ಉಪದ್ರವನ್ನು ಜ್ಞಾಪಿಸುವದಾಗಿದೆ:

> . . . ಯೆಹೋವನು ಗುಡುಗನ್ನೂ ಆನೆಕಲ್ಲಿನ ಮಳೆಯನ್ನೂ ಉಂಟುಮಾಡಿದನು. ಸಿಡಿಲುಗಳು ನೆಲಕ್ಕೆ ಬಿದ್ದವು . . . ಕಲ್ಲಿನ ಮಳೆಯು ಬಹುಬಲವಾಗಿತ್ತು. ಝುಗಝುಗಿಸುವ ಮಿಂಚೂ ಅದರೊಂದಿಗಿತ್ತು . . . ಆ ಕಲ್ಲಿನ ಮಳೆ ಐಗುಪ್ತದೇಶದ ಎಲ್ಲಾ ಕಡೆಯಲ್ಲಿ . . . ಬೈಲಿನಲ್ಲಿದ್ದ ಎಲ್ಲವನ್ನೂ ನಷ್ಟಪಡಿಸಿತು . . . ಆ ಕಲ್ಲಿನ ಮಳೆಯಿಂದ ಹೊಲಗಳಲ್ಲಿದ್ದ ಎಲ್ಲಾ ಪೈರುಗಳು ಹಾಳಾದವು. ಅಡವಿಯಲ್ಲಿದ್ದ ಮರಗಳು ಮುರಿದು ಹೋದವು (ವಿಮೋಚನಕಾಂಡ 9:23-25).

"ಝುಗಝುಗಿಸುವ ಮಿಂಚೂ ಅದರೊಂಗಿತ್ತು" ಎಂಬುದು ಬಹುಶಃ ಸಿಡಿಲು ಆಗಿರಬಹುದಾಗಿದೆ. ಇಸ್ರಾಯೇಲ್ಯರು ಈ ಆನೆಕಲ್ಲಿನ ಮಳೆಯ ಪರಿಣಾಮದಿಂದ ಹೊರಗಿಡಲ್ಪಟ್ಟಿದ್ದರು (ವಿಮೋಚನಕಾಂಡ 9:26), ಅದೇ ರೀತಿಯಲ್ಲಿಯೇ ನಂಬಿಗಸ್ತರಾದ ಕ್ರೈಸ್ತರು ಸಹ ತುತೂರಿಗಳಿಂದಾಗುವ ಪರಿಣಾಮಗಳಿಂದ ಬಾಧಿಸಲ್ಪಡುವದಿಲ್ಲ.

ವಿಮೋಚನಕಾಂಡದ ಏಳನೆಯ ಉಪದ್ರವ ಹಾಗೂ ಪ್ರಕಟನೆ ಪುಸ್ತಕದ ಮೊದಲನೆಯ ತುತೂರಿಗಳಲ್ಲಿ ಬಹಳ ಸಾಮ್ಯತೆಯು ಇರುತ್ತದೆ. ಇವೆರಡರ ವೇಳೆಯಲ್ಲಿಯೂ, ಆನೆಕಲ್ಲಿನ ಮಳೆ ಮತ್ತು ಬೆಂಕಿಯು ಭೂಮಿಯ ಮೇಲೆ ಬಿದ್ದವು, ಮರಗಳನ್ನು, ಹುಲ್ಲು, ಹಾಗೂ ಪೈರನ್ನು ನಾಶಗೊಳಿಸಿದವು. ಏಳನೆಯ ಉಪದ್ರವವು ಐಗುಪ್ತದ ಆರ್ಥಿಕತೆಯ ಮೇಲೆ ಪ್ರತಿಕೂಲವಾದ ಪರಿಣಾಮವನ್ನು ಬೀರಿತ್ತು, ಮೊದಲನೆಯ ತುತೂರಿಯ ವಿಷಯದಲ್ಲಿಯೂ ಹಾಗೆಯೇ ಆಗಿರುತ್ತದೆ: ಧಾನ್ಯ ಮತ್ತು ದ್ರಾಕ್ಷೆಗಳಂತಹ ಪೈರುಗಳು ಸುಟ್ಟುಹೋದವು. ಹುಲ್ಲುಗಾವಲುಗಳು ನಾಶವಾಗಿದ್ದು ಹಾಲು, ಮಾಂಸ, ಮತ್ತು ಉಣ್ಣೆಯ ಉತ್ಪನ್ನಗಳಿಗೆ ಬಹಳ ಬಾಧೆಯನ್ನುಂಟು ಮಾಡಿರಬಹುದಾಗಿದೆ. ಪ್ರಕಟನೆ 8ರಲ್ಲಿ ಹೇಳಲಾಗಿರುವ **ಮರಗಳು** ಎಂಬುದರಲ್ಲಿ ಹಣ್ಣಿನ ಮರಗಳು ಸಹ ನಿಶ್ಚಯವಾಗಿಯೂ ಸೇರಿದ್ದವು; "ಮರ" ಎಂಬುದಕ್ಕಿರುವ ಗ್ರೀಕ್ ಪದ

(δένδρον, *dendron*) ಎಂಬುದು ಅನೇಕ ಸಾರಿ ಹಣ್ಣಿನ ಮರಗಳನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ನೋಡಿರಿ ಮತ್ತಾಯ 7:17; ಯೂದನು 12).

ಹೇಗೂ, ಏಳನೆಯ ಉಪದ್ರವ ಹಾಗೂ ಮೊದಲನೆಯ ತುತೂರಿಗಳ ನಡುವೆ ಭಿನ್ನತೆಗಳು ಇದ್ದವು. ಮೊದಲನೆಯ ತುತೂರಿಯು ಊದಲ್ಪಟ್ಟಾಗ, ಭೂಮಿಯ ಮೇಲೆ ಆನೆಕಲ್ಲು ಹಾಗೂ ಬೆಂಕಿಗಳಿಗಿಂತಲೂ ಹೆಚ್ಚಿನವುಗಳು ಬಿದ್ದವು. ಅದು **ರಕ್ತದಲ್ಲಿ ಕಲಸಿದ** ಆನೆಕಲ್ಲಿನ ಮಳೆಯೂ ಬೆಂಕಿಯೂ ಆಗಿತ್ತು. ವ್ಯಾಖ್ಯಾನಕಾರರು ಕೆಲವು ಸಾರಿ ಸಹಾರಾ ಮರುಭೂಮಿಯಲ್ಲಿನ ಕೆಂಪು ಮರಳು ಗಾಳಿಯಲ್ಲಿ ಸೇರಿಕೊಂಡು ಮಳೆ ಹನಿಗಳೊಂದಿಗೆ ಮಿಶ್ರಣಗೊಂಡು ಬೀಳುವಂತಹ "ಕೆಂಪು ಮಳೆ" ಕುರಿತಾದ ಅಸ್ಪಷ್ಟವಾಗಿರುವ ಐತಿಹಾಸಿಕ ಉಲ್ಲೇಖವನ್ನು ಮಾಡುತ್ತಾರೆ. ಈ ವಿದ್ಯಮಾನವು ಪ್ರಕಟನೆ 8:7ರಲ್ಲಿನ ಚಿತ್ರಣದ ಮೇಲೆ ಪ್ರಭಾವವನ್ನು ಬೀರಿರಬಹುದಾಗಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಹೇಗೂ, ಯೋಹಾನನು ಕೆಂಪು ಮರಳು ಮಿಶ್ರಿತ ಮಳೆಯನ್ನು ಕಾಣಲಿಲ್ಲ; ಆತನು ಆಕಾಶಗಳಿಂದ *ರಕ್ತವು* ಸುರಿಸಲ್ಪಡುವದನ್ನು ಕಂಡನು. ಪ್ರೇರಣೆಯೊಂದಿಗೆ ಚಿತ್ರಿಸಲ್ಪಟ್ಟಿರುವ ಭಯಾನಕ ಚಿತ್ರಣವೆಂದರೆ ಗುಡುಗಿನಿಂದ ಕೂಡಿದ ಮಿಂಚು, ಬೃಹತ್ತಾಕರದ ಆನೆಕಲ್ಲುಗಳು ಭೂಮಿಗೆ ಬಡಿಯುತ್ತಿರುವದು, ಮತ್ತು ಮಳೆಯಾಗಿ ಸುರಿಯುತ್ತಿದ್ದ ಬೆಚ್ಚನೆಯ ಹಾಗೂ ಅಂಟಿನಿಂದ ಕೂಡಿದ ರಕ್ತವೇ ಆಗಿತ್ತು.

ಏಳನೆಯ ಉಪದ್ರವ ಹಾಗೂ ಮೊದಲನೆಯ ತುತೂರಿಯ ನಡುವಿನ ಗಮನಾರ್ಹವಾದ ವ್ಯತ್ಯಾಸವು ಏನೆಂದರೆ ಏಳನೆಯ ಉಪದ್ರವವು "ದೇಶದ *ಎಲ್ಲಾ* ಕಡೆಯಲ್ಲಿ . . . ಬೈಲಿನಲ್ಲಿದ್ದ *ಎಲ್ಲವನ್ನೂ* ನಷ್ಟಪಡಿಸಿತು" (ವಿಮೋಚನಕಾಂಡ 9:25; ಒತ್ತಿ ಹೇಳಿದ್ದು ನನ್ನದು), ಆದರೆ ಮೊದಲನೆಯ ತುತೂರಿಯು ಭೂಮಿಯ ಮೂರರಲ್ಲಿ ಒಂದು ಭಾಗದ ಮೇಲೆ ಮಾತ್ರವೇ ಬಾಧೆಯನ್ನುಂಟು ಮಾಡಿತ್ತು; ಮರಗಳೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು. ಕೆಲವರು 7ನೇ ವಚನವು **ಹಸುರು ಹುಲ್ಲೆಲ್ಲಾ ಸುಟ್ಟುಹೋಯಿತು** ಎಂದು ಹೇಳುತ್ತದೆ, ಆದರೆ ಬಳಿಕ 9:4ರಲ್ಲಿ, ಮಿಡತೆಗಳಿಗೆ "ಭೂಮಿಯ ಮೇಲಿರುವ ಹುಲ್ಲನ್ನಾಗಲಿ . . . ಕೆಡಿಸದೆ" ಇರಬೇಕೆಂದು ಹೇಳಲಾಗುತ್ತದೆ ಎಂಬುದರ ಬಗ್ಗೆ ಕಳಕಳಿ ಹೊಂದಿರುತ್ತಾರೆ. ಪ್ರಕಟನೆ ಪುಸ್ತಕದಲ್ಲಿ ಸಾಮಂಜಸ್ಯತೆಯು ಪ್ರಾಥಮಿಕ ಲಕ್ಷ್ಯವಾಗಿರುವದಿಲ್ಲವಾದರೂ, ಬಹುಶಃ ಇಲ್ಲಿ ಯಾವದೇ ಸಾಮಂಜಸ್ಯತೆಯು ಭಾಗಿಯಾಗಿರುವದಿಲ್ಲ. ಬಹುಶಃ ಒಬ್ಬನು *ಬಾಧಿಸಲ್ಪಟ್ಟ ಭೂಮಿಯೊಳಗೆ ಮೂರರಲ್ಲಿ ಒಂದು ಭಾಗದಲ್ಲಿದ್ದ* "ಹಸುರು ಹುಲ್ಲೆಲ್ಲಾ ಸುಟ್ಟುಹೋಯಿತು" ಎಂದು ಅರ್ಥಮಾಡಿಕೊಳ್ಳತಕ್ಕದ್ದು. ಇವುಗಳು ಭಾಗಶಃ ನ್ಯಾಯತೀರ್ಪುಗಳಾಗಿವೆ. ದೇವರ ಕೋಪದ ಬರೋಣವು ಆತನ ದೈವಿಕ ಕರುಣೆಯ ಒಂದು ಮಿನುಗು ನೋಟದೊಂದಿಗೆ ಸಮತೋಲನಗೊಳಿಸಲ್ಪಟ್ಟಿತು.

## ಎರಡನೆಯ ತುತೂರಿ (8:8, 9)

**8 ಎರಡನೆಯ ದೇವದೂತನು ತುತೂರಿಯನ್ನೂದಿದಾಗ ಬೆಂಕಿಹತ್ತಿ ಉರಿಯುವ ದೊಡ್ಡ ಬೆಟ್ಟವೋ ಎಂಬಂತಿರುವ ಒಂದು ವಸ್ತು ಸಮುದ್ರದಲ್ಲಿ ಹಾಕಲ್ಪಟ್ಟಿತು. ಆಗ ಸಮುದ್ರದೊಳಗೆ ಮೂರರಲ್ಲಿ ಒಂದು ಭಾಗ ರಕ್ತವಾಯಿತು; 9 ಸಮುದ್ರಜೀವಿಗಳೊಳಗೆ ಮೂರರಲ್ಲಿ ಒಂದು ಭಾಗ ಸತ್ತುಹೋಯಿತು; ಹಡಗುಗಳೊಳಗೆ ಮೂರರಲ್ಲಿ ಒಂದು ಭಾಗ ನಾಶವಾಯಿತು.**

**ವಚನ 8.** ಎರಡನೆಯ ತುತೂರಿಯು ಊದಲ್ಪಟ್ಟಾಗ **ಸಮುದ್ರದಲ್ಲಿ** ವಿನಾಶವುಂಟಾಯಿತು. ಬಹುಶಃ ಇಲ್ಲಿ ಉಲ್ಲೇಖವು ಮೆಡಿಟೆರ್ರೆನಿಯನ್ ಸಮುದ್ರದ ಕುರಿತಾಗಿರಬಹುದು.

ವ್ಯಾಖ್ಯಾನಕಾರರು **ಬೆಂಕಿಹತ್ತಿ ಉರಿಯುವ ದೊಡ್ಡ ಬೆಟ್ಟವೋ ಎಂಬಂತಿರುವ** ಚಿತ್ರಣದ

ಕುರಿತು ವ್ಯಾಮೋಹಕ್ಕೊಳಗಾಗುತ್ತಾರೆ. ಹಳೆಯ ಒಡಂಬಡಿಕೆಯಲ್ಲಿ ಬಾಬೇಲಿನ ನಾಶನದ ಕುರಿತಾಗಿ ಅದೇ ರೀತಿಯ ಚಿತ್ರಣವನ್ನು ಬಳಸಲಾಗುತ್ತದೆಂದು ಕೆಲವರು ಗಮನಕ್ಕೆ ತರುತ್ತಾರೆ (ಯೆರೆಮೀಯ 51:24, 25). ಕೆಲವು ವರ್ಷಗಳ ಮುಂಚೆ ಕ್ರಿ.ಶ. 79ರಲ್ಲಿ ವೆಸುವಿಯೆಸ್ ಪರ್ವತವು ವಿಸ್ಫೋಟಗೊಂಡದ್ದರಿಂದ ಈ ಸಾಂಕೇತಿಕತೆಯು ತೆಗೆದುಕೊಳ್ಳಲಾಗಿರುತ್ತದೆಂದು ಕೆಲವರು ಭಾವಿಸುತ್ತಾರೆ, ಆ ವಿಸ್ಫೋಟದಲ್ಲಿ Pompeiiಯು ಹುದುಗಿ ಹೋಯಿತು ಮತ್ತು Naplesನ ಕೊಲ್ಲಿಯು ನಿರ್ಜನಗೊಂಡಿತ್ತು.[22] ಇನ್ನು ಕೆಲವರು ನಂಬುವದೇನೆಂದರೆ ಪತ್ಮೋಸ್ ದ್ವೀಪದಿಂದ[23] ಸ್ವಲ್ಪ ದೂರದಲ್ಲಿಯೇ ಸಂಭವಿಸುತ್ತಿದ್ದ ಜ್ವಾಲಾಮುಖಿ ಸ್ಫೋಟಗಳಿಂದ ಸ್ಫೂರ್ತಿಗೊಂಡಿರಬಹುದು ಎಂಬುದೆ. ಯೋಹಾನನು ನೋಡಿರಬಹುದಾದ ಅಂತಹ ಜ್ವಾಲಾಮುಖಿಗಳಲ್ಲೊಂದೆಂದರೆ ಥಿಯಾ ಎಂಬ ಜ್ವಾಲಾಮುಖಿಯಾಗಿತ್ತು. ಹೇಗೂ, ಯೋಹಾನನು "ಬೆಂಕಿಯಿಂದ ಉರಿಯುತ್ತಿದ್ದ ಒಂದು ದೊಡ್ಡ ಬೆಟ್ಟವು ಸಮುದ್ರದಲ್ಲಿ ಬಿದ್ದಿತು" ಎಂದು ಹೇಳಲಿಲ್ಲ. ಬದಲಾಗಿ, ಆತನು "ದೊಡ್ಡ ಬೆಟ್ಟವೋ *ಎಂಬಂತಿರುವ* ಒಂದು ವಸ್ತುವನ್ನು" ಕಂಡೆನು ಎಂದು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). Barclayನ ತರ್ಜುಮೆಯಲ್ಲಿ "ಬೆಂಕಿಯಿಂದ ಉರಿಯುವ ಒಂದು ದೊಡ್ಡ ಬೆಟ್ಟ ಎಂದಷ್ಟೆ ನಾನು ಕರೆಯಬಹುದಾದ"[24] ಎಂದಿರುತ್ತದೆ. ಯೋಹಾನನು ನಿಖರವಾಗಿ ಏನನ್ನು ಕಂಡನು ಎಂಬುದು ತಿಳಿದು ಬಂದಿರುವದಿಲ್ಲ, ಆದರೆ ಅದು ಅಷ್ಟೇನೂ ಪ್ರಾಮುಖ್ಯವಲ್ಲ. "ದೊಡ್ಡ ಬೆಟ್ಟವೋ ಎಂಬಂತಿರುವ ಒಂದು ವಸ್ತು" ಎಂಬುದು ನಾಟಕೀಯ ಪರಿಣಾಮವನ್ನು ಒದಗಿಸುವದಕ್ಕೆ ಪವಿತ್ರಾತ್ಮನು ಬಳಸಿದ ಒಂದು ರಂಗಪರಿಕರ ಆಗಿತ್ತಷ್ಟೆ.

**ವಚನ 9.** ಇಲ್ಲಿ ಗಮನಾರ್ಹವಾದದ್ದು "ಬೆಟ್ಟ" ಅಲ್ಲ, ಆದರೆ ಅದು ಸಮುದ್ರದ ಮೇಲೆ ಬೀರಿದ ಪರಿಣಾಮವೇ ಆಗಿದೆ: **ಸಮುದ್ರಜೀವಿಗಳೊಳಗೆ ಮೂರರಲ್ಲಿ ಒಂದು ಭಾಗ ಸತ್ತುಹೋಯಿತು; ಹಡಗುಗಳೊಳಗೆ ಮೂರರಲ್ಲಿ ಒಂದು ಭಾಗ ನಾಶವಾಯಿತು.** ಮೊದಲನೆಯ ಉಪದ್ರವವು ಜ್ಞಾಪಕಕ್ಕೆ ಬರುತ್ತದೆ: ಮೋಶೆ . . . ಕೋಲನ್ನು ಎತ್ತಿ ನದಿಯಲ್ಲಿರುವ ನೀರನ್ನು ಹೊಡೆಯಲು ಅದೆಲ್ಲಾ ರಕ್ತವಾಯಿತು. ಅದರಲ್ಲಿದ್ದ ಮೀನುಗಳು ಸತ್ತು ಹೋದವು . . ." (ವಿಮೋಚನಕಾಂಡ 7:20, 21). ಅನಂತರದಲ್ಲಿ 16ನೇ ಅಧ್ಯಾಯದೊಳಗೆ ಮೂರನೆಯ ಪಾತ್ರೆಯು ಸುರಿಸಲ್ಪಡುವಾಗ, ಸಮುದ್ರವು ಪುನಃ ರಕ್ತವಾಗುವದು, ಆದರೆ ಅಲ್ಲಿ ಯಾವದೆ ಬೆಟ್ಟದ ಬಗ್ಗೆ ಪ್ರಸ್ತಾಪಿಸಲ್ಪಡುವದಿಲ್ಲ (16:3) ಮುಖ್ಯವಾದ ಸಂಗತಿಯು ಬೆಟ್ಟವಲ್ಲ, ಆದರೆ ಸಮುದ್ರ ನೀರು ರಕ್ತವಾಗಿ ಮಾರ್ಪಡುವದೇ ಆಗಿದೆ.

ಹೊಸ ಒಡಂಬಡಿಕೆಯ ಕಾಲದಲ್ಲಿ, ಮನುಷ್ಯರು ತಮ್ಮ ಬಹಳಷ್ಟು ಬದುಕಿಗಾಗಿ ಸಮುದ್ರವನ್ನು ಆಶ್ರಯಿಸುತ್ತಿದ್ದರು. ದೊಡ್ಡ ಜನಸಂಖ್ಯೆಯ ಕೇಂದ್ರಗಳು ಸಮುದ್ರ ದಡದುದ್ದಕ್ಕೂ ಇರುತ್ತಿದ್ದವು. ದೇಶಗಳು ವಾಣಿಜ್ಯಕ್ಕಾಗಿ ಸಮುದ್ರವನ್ನು ಅವಲಂಬಿಸಿರುತ್ತಿದ್ದವು. ಮೀನುಗಾರಿಕೆ ಉದ್ಯಮವು ಆಹಾರದ ದೊಡ್ಡ ಮೂಲವಾಗಿತ್ತು. ಹಡುಗುಗಳೊಳಗೆ ಮೂರರಲ್ಲಿ ಒಂದು ಭಾಗವು ಏಕಾಏಕಿ ಮುಳುಗಿ ಹೋಗಿ, ಮೀನುಗಳೊಳಗೆ ಮೂರರಲ್ಲಿ ಒಂದು ಭಾಗವು ಸತ್ತು ಹೋಗಿ ಬಿಟ್ಟರೆ ಇಡೀ ವಿಶ್ವ ಬಹಳಷ್ಟು ಸಂಕಷ್ಟಕ್ಕೆ ಸಿಲುಕುವದು. ಇಂದು ಜನರು ಆ ಮೊದಲನೆಯ ಶತಮಾನದ ಜನರ ರೀತಿಯಲ್ಲಿ ಸಮುದ್ರದ ಮೇಲೆ ಅಷ್ಟೊಂದು ಅವಲಂಬಿತರಾಗಿರುವದಿಲ್ಲ, ಆದರೆ ಹಡುಗುಗಳೊಳಗೆ ಮೂರರಲ್ಲಿ ಒಂದು ಭಾಗ ನಾಶಗೊಂಡು ಸಮುದ್ರ ಜೀವಿಗಳೊಳಗೆ ಮೂರರಲ್ಲಿ ಒಂದು ಭಾಗ ಸತ್ತುಹೋದರೆ ಈಗಲೂ ವಿನಾಶಕರವಾಗಿರುತ್ತದೆ. ಜನೆವರಿ 1, 1981ರ ವರೆಗೆ ನೋಡುವದಾದರೆ, ಹೆಚ್ಚುಕಡಿಮೆ 25,000 ಸಮುದ್ರ ಹಡುಗುಗಳು ನೊಂದಣಿ ಮಾಡಿಸಿಕೊಳ್ಳಲ್ಪಟ್ಟಿವೆ. ಒಂದೇ ಬಾರಿಗೆ ಏಕಕಾಲದಲ್ಲಿ

8,೦೦೦ ಹಡುಗುಗಳು ನಾಶಗೊಳ್ಳುವದನ್ನು ಕಲ್ಪಿಸಿಕೊಳ್ಳಿರಿ. ಸಮುದ್ರವು ವಿಶ್ವದ ಮೇಲ್ಭಾಗದೊಳಗೆ ಸುಮಾರು ನಾಲ್ಕರಲ್ಲಿ ಮೂರು ಭಾಗಗಳನ್ನು ಆವರಿಸಿಕೊಂಡಿರುತ್ತದೆ. ಮೂರರಲ್ಲಿ ಒಂದು ಭಾಗವು ಭೂಮಿಯ ಒಟ್ಟಾರೆ ಭೂಪ್ರದೇಶಕ್ಕೆ ಸಮಾನವಾಗಿರುತ್ತದೆ. ಅಷ್ಟೊಂದು ಪ್ರಮಾಣದ ಪ್ರದೇಶದ ಮೇಲೆ ಪ್ರತಿಕೂಲವಾದ ಪರಿಣಾಮವು ಬೀರಲ್ಪಡುವದಾದರೆ, ಅದು ನಿಜಕ್ಕೂ ವಿನಾಶಕರವಾಗಿರುವದು.

ಅನಂತರದಲ್ಲಿ, ಪಾತ್ರೆಗಳು ಸುರಿಸಲ್ಪಡುವಾಗ, "ಅವರು ದೇವಜನರ ಮತ್ತು ಪ್ರವಾದಿಗಳ ರಕ್ತವನ್ನು ಸುರಿಸಿದರು," ಆದ್ದರಿಂದ ನೀರನ್ನು ರಕ್ತವಾಗಿ ಮಾರ್ಪಡಿಸಿದ್ದು ಅವರಿಗೆ ತಕ್ಕದಾದ ನ್ಯಾಯತೀರ್ಪೇ ಆಗಿರುತ್ತದೆಂದು ಒಬ್ಬ ದೇವದೂತನು ಘೋಷಿಸುತ್ತಾನೆ (16:6). ಶಾಸ್ತ್ರವು ಹೀಗೆ ಹೇಳುತ್ತದೆ, "ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೆ ಕೊಯ್ಯಬೇಕು" (ಗಲಾತ್ಯ 6:7).

## ಮೂರನೆಯ ತುತೂರಿ (8:10, 11)

**[10]ಮೂರನೆಯ ದೇವದೂತನು ತುತೂರಿಯನ್ನೂದಿದಾಗ ಪಂಜಿನಂತೆ ಉರಿಯುವ ಒಂದು ದೊಡ್ಡ ನಕ್ಷತ್ರವು ಆಕಾಶದಿಂದ ಬಿತ್ತು. ಅದು ನದಿಗಳೊಳಗೆ ಮೂರರಲ್ಲಿ ಒಂದು ಭಾಗದ ಮೇಲೆಯೂ ನೀರಿನ ಒರತೆಗಳ ಮೇಲೆಯೂ ಬಿತ್ತು. [11]ಆ ನಕ್ಷತ್ರಕ್ಕೆ ಮಾಚಿ ಪತ್ರೆ ಎಂದು ಹೆಸರು. ನೀರಿನೊಳಗೆ ಮೂರರಲ್ಲಿ ಒಂದು ಭಾಗ ಮಾಚಿಪತ್ರೆಯಂತೆ ಕಹಿಯಾಯಿತು. ಆ ನೀರು ವಿಷವಾದದ್ದರಿಂದ ಮನುಷ್ಯರಲ್ಲಿ ಅನೇಕರು ಸತ್ತರು.**

**ವಚನ 10.** ಮೂರನೆಯ ತುತೂರಿಯು ಊದಲ್ಪಟ್ಟಾಗ ನೀರುಗಳ ಮೇಲೆ ವಿನಾಶವು ಸಂಭವಿಸಿತ್ತು: **ಮೂರನೆಯ ದೇವದೂತನು ತುತೂರಿಯನ್ನೂದಿದಾಗ ಪಂಜಿನಂತೆ ಉರಿಯುವ ಒಂದು ದೊಡ್ಡ ನಕ್ಷತ್ರವು ಆಕಾಶದಿಂದ ಬಿತ್ತು. ಅದು ನದಿಗಳೊಳಗೆ ಮೂರರಲ್ಲಿ ಒಂದು ಭಾಗದ ಮೇಲೆಯೂ ನೀರಿನ ಒರತೆಗಳ ಮೇಲೆಯೂ ಬಿತ್ತು.**

ಮತ್ತೊಂದಾವರ್ತಿ, ವ್ಯಾಖ್ಯಾನಕಾರರು **ದೊಡ್ಡ ನಕ್ಷತ್ರ**ದ ಅರ್ಥವೇನಾಗಿರಬಹುದೆಂದು ತೊಳಲಾಡುತ್ತಾ "ಚಿಕ್ಕ ವಿಷಯಗಳಲ್ಲಿ ದೊಡ್ಡ ಪಾಂಡಿತ್ಯ" ಸಾಧಿಸುವದಕ್ಕೆ ಪ್ರಯತ್ನಿಸುತ್ತಾರೆ. ಒಬ್ಬನು ಬಾಬೇಲಿನ ಅರಸನ ಪತನವನ್ನು ಸೂಚಿಸುವದಕ್ಕೆ ಹಳೆಯ ಒಡಂಬಡಿಕೆಯಲ್ಲಿ ಅದೇ ರೀತಿಯ ಪರಿಭಾಷೆಯು ಬಳಸಲ್ಪಟ್ಟಿದೆ ಎಂಬುದಾಗಿ ಗಮನಕ್ಕೆ ತರುತ್ತಾನೆ (ಯೆಶಾಯ 14:4, 12). ಮತ್ತೊಬ್ಬನು ಪ್ರಕಟನೆ ಪುಸ್ತಕದಲ್ಲಿ *ಆತ್ಮೀಕ* ಬಾಬೇಲಿನ ಅಥವಾ ರೋಮಿನ ಅರಸನು (ಓದಿರಿ 17:9, 18) Domitian - ಆದ್ದರಿಂದ ದೊಡ್ಡ ನಕ್ಷತ್ರವು ಎಂದರೆ ಚಕ್ರವರ್ತಿಯೇ ಆಗಿರಬೇಕು ಎಂದು ಮುಂದಿಡುತ್ತಾನೆ. ಇನ್ನೂ ಒಬ್ಬನು ಆ ನಕ್ಷತ್ರವು ಬಹಳ ಇತ್ತೀಚಿನ ಇತಿಹಾಸದಲ್ಲಿನ ಯಾವದೋ ಒಬ್ಬ ವ್ಯಕ್ತಿಯಾಗಿರಬೇಕೆಂದು ಗುರುತಿಸುತ್ತಾನೆ. ಮುಂದುವರೆದ-ಐತಿಹಾಸಿಕ ದೃಷ್ಟಿಕೋನವನ್ನು ಅನುಸರಿಸುವವರು ಈ ನಕ್ಷತ್ರವನ್ನು ಗತಕಾಲದಲ್ಲಿನ ಒಬ್ಬ ಐತಿಹಾಸಿಕ ವ್ಯಕ್ತಿಯೆಂದು ಗುರುತಿಸಿದರೆ, ಸಹಸ್ರವರ್ಷಪೂರ್ವಾಡಳಿತ ವಾದಿಗಳು ಇದು ಭಯಾನಕವಾದ ಐತಿಹಾಸಿಕ ವ್ಯಕ್ತಿ, "ಕ್ರಿಸ್ತವಿರೋಧಿ" ಎಂದು ಗುರುತಿಸುತ್ತಾರೆ. ಇನ್ನು ಕೆಲವರು ಇದು ಮುಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸುವ ಅದೇ ನಕ್ಷತ್ರವೇ ಆಗಿರುತ್ತದೆ, ಆದಕಾರಣ ಸೈತಾನನನ್ನು ಸೂಚಿಸುತ್ತದೆಂದು ವಾದಿಸುತ್ತಾರೆ (9:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಕೆಲವರು ಈ ವಚನದಲ್ಲಿ ಮತ್ತು 9:1ರಲ್ಲಿ ಒಂದು ನಕ್ಷತ್ರವು "ಆಕಾಶದಿಂದ ಬಿತ್ತು" ಎಂದು ಹೇಳಿದರೆ, ಇದಕ್ಕೆ ಮುಂಚೆ 6:13ರಲ್ಲಿ ಆಕಾಶದ ನಕ್ಷತ್ರಗಳೆಲ್ಲಾ ಭೂಮಿಗೆ ಬಿದ್ದವು ಎಂದು

ಹೇಳಲಾಗಿತ್ತು ಎಂಬ ವಾಸ್ತವಾಂಶದ ಕುರಿತು ಚಿಂತಿಸುತ್ತಾರೆ. ಈ ವಾಸ್ತವಾಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ: (1) ಇದು ಸಾಂಕೇತಿಕತೆ ಆಗಿದೆ, ಹೊರತು ವಾಸ್ತವಿಕತೆಯಲ್ಲ. ಒಂದು ವಾಸ್ತವಿಕವಾದ ನಕ್ಷತ್ರವು ಭೂಮಿಗೆ ಬೀಳಲಿಕ್ಕೆ ಆಗದು, ಯಾಕೆಂದರೆ ನಕ್ಷತ್ರಗಳು ಭೂಮಿಗಿಂತಲೂ ದೊಡ್ಡವುಗಳಾಗಿರುತ್ತವೆ. (2) ಈ ಪುಸ್ತಕದಲ್ಲಿ ಸಾಮಂಜಸ್ಯತೆಯು ಮೊದಲ ಪ್ರಾಮುಖ್ಯತೆಯನ್ನು ಹೊಂದಿರುವದಿಲ್ಲ. (3) ಪ್ರತಿಯೊಂದು ವಿಭಾಗವು ಹೆಚ್ಚು ಅಥವಾ ಕಡಿಮೆ "ಮೊದಲಿನಿಂದ ಆರಂಭಗೊಳ್ಳುವದಾಗಿದೆ," ಆದ್ದರಿಂದ ಮುಂಚಿನ ವಿಭಾಗದಲ್ಲಿ ಒಂದು ನಕ್ಷತ್ರವು ಭೂಮಿಗೆ ಬಿದ್ದಿತು ಎಂಬುದಕ್ಕೂ ಈ ವಿಭಾಗಕ್ಕೂ ಯಾವದೇ ಸಂಬಂಧವಿರುವದಿಲ್ಲ.

ಪುನಃ, ನಕ್ಷತ್ರವು ಪ್ರಾಥಮಿಕವಾಗಿ ಒಂದು ರಂಗಪರಿಕರವಾಗಿರುತ್ತದೆ ಅಷ್ಟೆ. ಈ ವಾಕ್ಯಭಾಗವು ತಿಳಿಸಲಿಚ್ಛಿಸುವ ಸಂಗತಿ ಆ ನಕ್ಷತ್ರವು ಕುಡಿಯುವ ನೀರಿನ ಮೂಲಗಳ ಮೇಲೆ ಪರಿಣಾಮ ಬೀರಿತು ಎಂಬುದೆ. ಮುಂಚಿನ ಎರಡು ತುತೂರಿಗಳಲ್ಲಿರುವ ಪ್ರಕಾರವೇ, **ಮೂರರಲ್ಲಿ ಒಂದು ಭಾಗದ** ಮೇಲೆ ಮಾತ್ರವೇ ಹಾನಿಯುಂಟಾಗುವದು - ಒಂದು ಗಮನಾರ್ಹವಾದ ಪ್ರಮಾಣ, ಆದರೆ ಎಲ್ಲವೂ ಅಲ್ಲ.

**ವಚನ 11. ಆ ನಕ್ಷತ್ರಕ್ಕೆ ಮಾಚಿ ಪತ್ರೆ ಎಂದು ಹೆಸರು. ನೀರಿನೊಳಗೆ ಮೂರರಲ್ಲಿ ಒಂದು ಭಾಗ ಮಾಚಿಪತ್ರೆಯಂತೆ ಕಹಿಯಾಯಿತು. ಆ ನೀರು ವಿಷವಾದದ್ದರಿಂದ ಮನುಷ್ಯರಲ್ಲಿ ಅನೇಕರು ಸತ್ತರು.**

ನಕ್ಷತ್ರವು ಬಿದ್ದಾಗ ನದಿಗಳು ಮತ್ತು ಒರತೆಗಳು **ವಿಷವಾದ**ದ್ದಾಗಿ ಮಾರ್ಪಟ್ಟವು. ಅನೇಕ ಲೇಖಕರು ಈ ದೃಶ್ಯವು ಮಾರಾ ಎಂಬ ಸ್ಥಳದಲ್ಲಾದ ಅದ್ಭುತವು ಹಿಮ್ಮೊಗದಲ್ಲಿ ಸಂಭವಿಸಿದಂತಿರುತ್ತದೆ ಎಂದು ತಿಳಿಸುತ್ತಾರೆ: ಮಾರಾ ಎಂಬ ಸ್ಥಳದಲ್ಲಿ ವಿಷವುಳ್ಳ ನೀರು ಸಿಹಿ ನೀರಾಗಿ ಮಾರ್ಪಡಿಸಲ್ಪಟ್ಟಿತ್ತು (ವಿಮೋಚನಕಾಂಡ 15:23-26). ಇಲ್ಲಿ **ಮಾಚಿಪತ್ರೆ** ಎಂಬ ಪದವು ಭಯಸೂಚಕವಾಗಿ ಕಾಣಿಸುತ್ತದೆ.[25] ಇದು ಗೆದ್ದಲುಗಳಿಂದಾದ ರಂಧ್ರಗಳುಳ್ಳ ಕೊಳೆತಿರುವ ಕಟ್ಟಿಗೆಯ ಚಿತ್ರಣವನ್ನು ಮನಸ್ಸಿನಲ್ಲಿ ಎಬ್ಬಿಸುವದಾಗಿದೆ. ವಾಸ್ತವಿಕದಲ್ಲಿ, ಮಾಚಿಪತ್ರೆಯು ಹುಳು ಅಥವಾ ಕಟ್ಟಿಗೆಯೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಬದಲಾಗಿ, ಅದು ವರ್ಣನೆಯಿಲ್ಲದಂತೆ ಕಾಣುವ ಒಂದು ಗಿಡವಾಗಿರುತ್ತದೆ. "ಮಾಚಿಪತ್ರೆ" ಎಂಬುದು *Artemisia absinthium* ಎಂಬುದಾಗಿ ಪರಿಚಿತವಿರುವ ಒಂದು ವರ್ಗದ ಗಿಡಗಳಿಗಿರುವ ಸಾಮಾನ್ಯವಾದ ಹೆಸರಾಗಿರುತ್ತದೆ, ಅದು ಕಹಿಯಾದ ರುಚಿಯನ್ನು ಹೊಂದಿರುತ್ತದೆ. ಅವುಗಳ ಅನೇಕ ವಿಧಗಳು ಪಿಲಿಷ್ಟಿಯದಲ್ಲಿ ಬೆಳೆಯುತ್ತಿದ್ದವು. ಆ ಗಿಡವನ್ನು ಅನೇಕ ಪ್ರೇರಿತ ಲೇಖಕರು ಅವಿಧೇಯತೆಯಿಂದಾಗುವ ಕಹಿ ಫಲವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ಧರ್ಮೋಪದೇಶಕಾಂಡ 29:17, 18; ಜ್ಞಾನೋಕ್ತಿ 5:4; ಯೆರೆಮೀಯ 9:14, 15; 23:15; ಪ್ರಲಾಪಗಳು 3:15, 19; ಆಮೋಸ 5:7; 6:12). ಮಾಚಿಪತ್ರೆ ಗಿಡವು ವಿಷಕಾರಿಯಲ್ಲ, ಆದರೆ ಯೋಹಾನನ ದರ್ಶನದಲ್ಲಿ, ಅದು ನೀರನ್ನು ಕುಡಿಯುವದಕ್ಕೆ ಯೋಗ್ಯವಲ್ಲದ್ದನ್ನಾಗಿ ಮಾಡಿದ್ದಷ್ಟೇ ಅಲ್ಲ, ಆದರೆ ಮರಣಾಂತಿಕವಾಗಿ ಮಾರ್ಪಡಿಸಿತ್ತು. SEB ತರ್ಜುಮೆಯು ಈ ವಚನವನ್ನು ಹೀಗೆ ಅನುವಾದಿಸುತ್ತದೆ, "ಆ ನಕ್ಷತ್ರದ ಹೆಸರು ಕಹಿತನ. ಅದು ನೀರುಗಳೊಳಗೆ ಮೂರರಲ್ಲಿ ಒಂದು ಭಾಗವನ್ನು ಕಹಿಯಾಗಿ ಮಾರ್ಪಡಿಸಿತು. ಅನೇಕ ಜನರು ಆ ನೀರಿನಿಂದಾಗಿ ಮರಣಿಸಿದರು; ಅದು ವಿಷಕಾರಿಯಾಗಿತ್ತು."

ಮನುಷ್ಯರು ಶುದ್ಧ ಕುಡಿಯುವ ನೀರಿಲ್ಲದ ಬಹಳ ಕಾಲ ಬದುಕುವದಕ್ಕಾಗುವದಿಲ್ಲ. ಭೂಮಿಯ ಮೇಲಿನ ಕುಡಿಯುವ ನೀರಿನೊಳಗೆ ಮೂರರಲ್ಲಿ ಒಂದು ಭಾಗವು ನಾಶವಾಗುವದಾದರೆ ನೀರು ಒದಗಿಸಲ್ಪಡುವದು ವಿನಾಶಕರವಾಗಿರುವದು. ಪ್ರವಾಹಗಳು

ಮತ್ತು ಇತರ ವಿನಾಶಗಳು ನೀರನ್ನು ಕಲುಷಿತಗೊಳಿಸುವ ವಿಫತ್ತಿಗೊಳಗಾಗುವ ಪ್ರಾಂತ್ಯಗಳಲ್ಲಿ, ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳು ವಿಫತ್ತಿಗೊಳಗಾಗಿರುವವರಿಗೆ ತುರ್ತಾಗಿ ಕುಡಿಯುವ ನೀರನ್ನು ಒದಗಿಸುವದಕ್ಕೆ ಅವಸರದಿಂದ ಪ್ರಯತ್ನಿಸುತ್ತವೆ. ಅವರು ಒದಗಿಸಲಿಲ್ಲವಾದರೆ, ಆ ಪ್ರದೇಶದಲ್ಲೆಲ್ಲಾ ರೋಗಗಳು ವ್ಯಾಪಕವಾಗಿ ಹಬ್ಬುತ್ತವೆ, ನಂತರ ಸಾವುಗಳು ಸಂಭವಿಸುತ್ತವೆ. ಲೋಕದೊಳಗೆ ಮೂರರಲ್ಲಿ ಒಂದು ಭಾಗವು ಅಂಥ ವಿನಾಶತೆಯಿಂದ ತುಂಬಿರುವದೆಂಬುದನ್ನು ಊಹಿಸಿಕೊಳ್ಳುವದು ಸಹ ಕಲ್ಪನಾಶಕ್ತಿಯನ್ನೇ ನಡುಗಿಸುತ್ತದೆ.

ತುತೂರಿಯನ್ನು ಊದುವಲ್ಪಡುವದಕ್ಕೆ ಸಂಬಂಧಿಸಿದಂತೆ ಮನುಷ್ಯರು ಮರಣಿಸುತ್ತಾರೆಂಬುದಾಗಿ 11ನೇ ವಚನವು ಮೊದಲ ಬಾರಿಗೆ ನಿರ್ದಿಷ್ಟವಾಗಿ ಹೇಳುವದಾಗಿದೆ, ಆದಾಗ್ಯೂ ಇದಕ್ಕೆ ಮುಂಚೆ ಮರಗಳೊಳಗೆ ಮೂರರಲ್ಲಿ ಒಂದು ಭಾಗ ನಾಶಗೊಂಡ ವೇಳೆ (ಮೊದಲನೆಯ ತುತೂರಿ) ಮತ್ತು ಹಡುಗುಗಳೊಳಗೆ ಮೂರರಲ್ಲಿ ಒಂದು ಭಾಗ ನಾಶಗೊಂಡ ವೇಳೆ (ಎರಡನೆಯ ತುತೂರಿ) ಸಹ ಮರಣಗಳು ಸಂಭವಿಸಿರಬಹುದಾಗಿದೆ ಎಂದು ಊಹಿಸಿಕೊಳ್ಳಲಾಗುತ್ತದೆ. ಈ ಮುಂಚೆ ಗಮನಿಸಿರುವ ಪ್ರಕಾರ, ಮೊದಲ ನಾಲ್ಕು ತುತೂರಿಗಳು ಜನರ ಮೇಲೆ *ಪರೋಕ್ಷವಾಗಿ* ಪರಿಣಾಮ ಬೀರಿದವು, ಹೊರತು ನೇರವಾಗಿ ಅಲ್ಲ. 11ನೇ ವಚನವು ಮನುಷ್ಯರೊಳಗೆ "ಮೂರರಲ್ಲಿ ಒಂದು ಭಾಗ" ಮರಣಿಸಿದರು ಎಂದು ಹೇಳುವದಿಲ್ಲ, ಆದರೆ **ಮನುಷ್ಯರಲ್ಲಿ ಅನೇಕರು ಸತ್ತರು** ಎಂದಷ್ಟೆ ಹೇಳುತ್ತದೆ.

## ನಾಲ್ಕನೆಯ ತುತೂರಿ (8:12)

**[12]ನಾಲ್ಕನೆಯ ದೇವದೂತನು ತುತೂರಿಯನ್ನೂದಿದಾಗ ಸೂರ್ಯ ಚಂದ್ರ ನಕ್ಷತ್ರಗಳೊಳಗೆ ಮೂರರಲ್ಲಿ ಒಂದು ಭಾಗವು ಬಡಿಯಲ್ಪಟ್ಟು ಕತ್ತಲಾಯಿತು. ಆದದರಿಂದ ಹಗಲಿನೊಳಗೆ ಮೂರರಲ್ಲಿ ಒಂದು ಭಾಗವು ಪ್ರಕಾಶವಿಲ್ಲದೆ ಇತ್ತು. ರಾತ್ರಿಯು ಹಾಗೆಯೇ ಆಯಿತು.**

**ವಚನ 12.** ನಾಲ್ಕನೆಯ ತುತೂರಿಯು ಊದಲ್ಪಟ್ಟಾಗ ಪ್ರಾಚೀನರು ಬಳಸುವಂಥ ಪ್ರಕೃತಿಯ ಅಂತಿಮ ವಿಭಾಗದ ಮೇಲೆ ನಾಶನವನ್ನುಂಟು ಮಾಡಿತು: ಆಕಾಶಗಳು. ಸ್ವಲ್ಪ ಮಟ್ಟಿಗೆ, ಈ ತುತೂರಿಯು ಒಂಭತ್ತನೆಯ ಉಪದ್ರವನ್ನು ಪ್ರತಿಧ್ವನಿಸುತ್ತದೆ: "ಮೋಶೆ ಆಕಾಶಕ್ಕೆ ಕೈಚಾಚಿದಾಗ ಐಗುಪ್ತ ದೇಶದಲ್ಲೆಲ್ಲಾ ಮೂರು ದಿವಸ ಕಾರ್ಗತ್ತಲು ಮುಚ್ಚಿಕೊಂಡಿತು" (ವಿಮೋಚನಕಾಂಡ 10:22).

ಈ ಜಾಗತಿಕ ವಿನಾಶಗಳ ದೃಶ್ಯಗಳನ್ನು ಅಕ್ಷರಶಃವಾಗಿ ತೆಗೆದುಕೊಳ್ಳುವವರು ನಾಲ್ಕನೆಯ ತುತೂರಿಯ ವಿಷಯದಲ್ಲಿ ಸಮಸ್ಯೆಯನ್ನು ಹೊಂದಿರುತ್ತಾರೆ. ಸೂರ್ಯ, ಚಂದ್ರ, ನಕ್ಷತ್ರಗಳೊಳಗೆ ಮೂರರಲ್ಲಿ ಒಂದು ಭಾಗ ಅಕ್ಷರಶಃ ಹೊಡೆಯಲ್ಪಡುವದಾದಲ್ಲಿ, ಅವುಗಳ ಪ್ರಕಾಶದೊಳಗೆ ಮೂರರಲ್ಲಿ ಒಂದು ಭಾಗದಷ್ಟು ಕಡಿಮೆಯಾಗುವದು, ಆದರೆ ಆಗಲೂ ನಮಗೆ ಸುಮಾರು ಹನ್ನೆರಡು ಗಂಟೆಗಳಷ್ಟು ಬೆಳಕು ಇದ್ದೇ ಇರುತ್ತದೆ (ಬೆಳಕು ಮೊಬ್ಬಾಗಿರುತ್ತದೆ, ಆದರೆ ಆಗಲೂ ಬೆಳಕಿರುತ್ತದೆ), ಆದಾಗಿ ಹನ್ನೆರಡು ಗಂಟೆಗಳಷ್ಟು ಕತ್ತಲು ಇರುತ್ತದೆ (ಹೆಚ್ಚು ಕಗ್ಗತ್ತಲು, ಆದರೆ ಸಂಪೂರ್ಣ ಕತ್ತಲು ಅಲ್ಲ). ಬದಲಾಗಿ, ಯೋಹಾನನ ದರ್ಶನದಲ್ಲಿ, ಆಕಾಶ ಕಾಯಗಳು ಬಡಿಯಲ್ಪಡುವದು ಹಗಲು ಮತ್ತು ರಾತ್ರಿಗಳೆರಡರಲ್ಲಿಯೂ ಬೆಳಕು ಇಲ್ಲದ ದೀರ್ಘಕಾಲಾವಧಿಗಳು ಸಂಭವಿಸಿದವು. SEBಯು ಅಸಾಮಂಜಸ್ಯತೆಯನ್ನು ತೆಗೆದು ಹಾಕುವದಕ್ಕೆ ಪ್ರಯತ್ನಿಸುವ ವೈಶಿಷ್ಟವಾದ ತರ್ಜುಮೆಯಾಗಿರುತ್ತದೆ. ಅದು ಹೀಗೆ ಹೇಳುತ್ತದೆ, "ದಿನವು ವಾಡಿಕೆಯಂತೆ ಕೇವಲ ಮೂರರಲ್ಲಿ ಒಂದು ಭಾಗದಷ್ಟು ಮಾತ್ರವೇ

ಪ್ರಕಾಶಮಾನವಾಗಿತ್ತು" - ಆದರೆ ಇದು ಮೂಲ ವಾಕ್ಯದಲ್ಲಿರುವ ಪ್ರಕಾರದ ಪರಿಭಾಷೆಯಾಗಿರುವದಿಲ್ಲ.

8ನೇ ಅಧ್ಯಾಯದಲ್ಲಿ ಅಕ್ಷರಶಃ ಸತ್ಯವಾಗಿರುವದಕ್ಕೆ ಸಾಧ್ಯವಿಲ್ಲದ ಮೊದಲ ದೃಶ್ಯವು ಈ ಚಿತ್ರಣವೇ ಮೊದಲನೆಯದ್ದು ಆಗಿರುವದಿಲ್ಲ: ರಕ್ತವು ಆಕಾಶದಿಂದ ಬೀಳುವದಿಲ್ಲ, ಬೆಟ್ಟಗಳು ಸಮುದ್ರದಲ್ಲಿ ಎಸೆಯಲ್ಪಡುವದಿಲ್ಲ, ಮತ್ತು ನಕ್ಷತ್ರಗಳು ಭೂಮಿಗೆ ಬೀಳುವದು ಸಾಧ್ಯವಿರುವದಿಲ್ಲ. ಆ ರೀತಿಯಲ್ಲಿ ತದ್ವಿರುದ್ಧವೆಂದು ಕಾಣಿಸುವಂಥವುಗಳು ಯೋಹಾನನಿಗೆ ಚಿಂತೆಯನ್ನುಂಟು ಮಾಡಲಿಲ್ಲ, ಮತ್ತು ಅವುಗಳ ವಿಷಯದಲ್ಲಿ ಇಂದಿನ ಕ್ರೈಸ್ತರು ಸಹ ಚಿಂತಿಸಬೇಕಾಗಿಲ್ಲ. ಅಪೊಸ್ತಲನು "ವಿವರಗಳ ಸಾಮಂಜಸ್ಯತೆಯ ಕುರಿತು ಪರಿಗಣನೆಗೆ ತೆಗೆದುಕೊಳ್ಳದೆ ಸಾಂಕೇತಿಕತೆಯನ್ನು ಒಂದಾದರ ಮೇಲೊಂದರಂತೆ ಮುಂದಿಡುವ ಮೂಲಕ ಬಯಸಿದ ಪರಿಣಾಮವನ್ನುಂಟು ಮಾಡುವದರಲ್ಲಿ ಸಂತೃಪ್ತನಾಗಿದ್ದನು."[26] Leon Morrisನು ತಕ್ಕ ಹೇಳಿಕೆಯನ್ನು ಕೊಟ್ಟಿರುತ್ತಾನೆ: ". . . ನಾವೊಂದು ವೈಜ್ಞಾನಿಕ ಗದ್ಯಭಾಗದ ಪಾಂಡಿತ್ಯ ಪುಸ್ತಕವನ್ನು ರಚಿಸುತ್ತಿದ್ದೇವೋ ಎಂಬಂತೆ ಈ ತೀಕ್ಷ್ಣವಾದ, ಭಾವನಾತ್ಮಕವಾದ ಮತ್ತು ಕಾವ್ಯಾತ್ಮಕ ಪುಸ್ತಕವನ್ನು ಓದುವದು ಒಂದು ದೊಡ್ಡ ತಪ್ಪಾಗುತ್ತದೆ. ಆತನು ಕಣ್ಣಿಗೆ ಕಟ್ಟಿದಂಥ ಚಿತ್ರಗಳನ್ನು ಬಿಡಿಸುತ್ತಿದ್ದಾನೆ ಮತ್ತು ಎಲ್ಲಾ ವಿವರಗಳು ಅತಿ ಚಿಕ್ಕ ಪ್ರಮಾಣದಲ್ಲಿ ಎಲ್ಲೋ ಒಂದು ಕಡೆ ತಕ್ಷಣವೇ ಸಾಮರಸ್ಯಗೊಳ್ಳದಿದ್ದರೆ ಅದೇನೂ ಅಷ್ಟು ಪ್ರಾಮುಖ್ಯವಲ್ಲ . . ."[27]

ಇಲ್ಲಿ ತಿಳಿಸಲಿಚ್ಛಿಸುವ ಸಂಗತಿಯೇನೆಂದರೆ *ಇಡೀ ವಿಶ್ವವು* ಬಾಧಿಸಲ್ಪಟ್ಟಿತು ಎಂಬುದೇ. ಸೂರ್ಯನು ಭೂಮಿಯ ಮೇಲಿನ ಜೀವ ಮತ್ತು ಶಕ್ತಿಗೆ ಪ್ರಮುಖ ಮೂಲಧಾರ. ಸೂರ್ಯನ ತೀಕ್ಷ್ಣತೆಯಲ್ಲಿ ಯಾವದೇ ಒಂದು ದೊಡ್ಡ ಕುಗ್ಗುವಿಕೆ ಅಥವಾ ಹೆಚ್ಚಾಗುವಿಕೆ ಸಂಭವಿಸಿದರೆ ಈ ಭೂಗ್ರಹದಲ್ಲಿ ನಮಗೆ ತಿಳಿದಿರುವ ಜೀವರಾಶಿಯನ್ನು ನಾಶಗೊಳಿಸುವದು. ದೇವರು ಪಾಪದ ಗಾಂಭೀರ್ಯತೆಯನ್ನು ತೋರಿಸಿ ಕೊಡುವದಕ್ಕಾಗಿ - ಮತ್ತು ಪಾಪಿಗಳನ್ನು ಪಶ್ಚಾತ್ತಾಪಕ್ಕೆ ಕರೆಯುವದಕ್ಕಾಗಿ ಈ ಭೌಗೋಳಿಕ ಸಾಂಕೇತಿಕೆಯನ್ನು ಬಳಸುತ್ತಾನೆ.

## ಗರುಡಪಕ್ಷಿಯ ಎಚ್ಚರಿಕೆ (8:13)

**13ಆ ಮೇಲೆ ನಾನು ನೋಡಲಾಗಿ ಇಗೋ, ಒಂದೇ ಗರುಡಪಕ್ಷಿಯು ಆಕಾಶಮಧ್ಯದಲ್ಲಿ ಹಾರಾಡುತ್ತಿತ್ತು. ಅದು - ಅಯ್ಯೋ, ಅಯ್ಯೋ, ಅಯ್ಯೋ, ಊದಬೇಕಾಗಿರುವ ಮೂವರು ದೇವದೂತರ ಮಿಕ್ಕಾದ ತುತೂರಿಯ ಧ್ವನಿಗಳು ಉಂಟಾಗುವಾಗ ಭೂನಿವಾಸಿಗಳಿಗೆ ಎಂಥಾ ವಿಪತ್ತುಗಳು ಸಂಭವಿಸುವವು ಎಂದು ಮಹಾ ಶಬ್ದದಿಂದ ಹೇಳುವದನ್ನು ಕೇಳಿದೆನು.**

**ವಚನ 13.** ಯೋಹಾನನು ಮೊದಲ ನಾಲ್ಕು ತುತೂರಿಗಳು ಊದಲ್ಪಡುವದನ್ನು ಕಂಡ ಬಳಿಕ, ಆತನು **ಒಂದೇ ಗರುಡಪಕ್ಷಿಯು ಆಕಾಶಮಧ್ಯದಲ್ಲಿ ಹಾರಾಡುತ್ತಿತ್ತು** ಎಂಬುದನ್ನು ಕಂಡನು ಮತ್ತು ಕೇಳಿಸಿಕೊಂಡನು. ಕೆಲವು ಪ್ರಾಚೀನ ವಾಕ್ಯಗಳೊಳಗೆ ಇಲ್ಲಿ "ದೇವದೂತನು" (ἄγγελος, *angelos*) ಎಂದು ಬಳಲ್ಪಟ್ಟಿರುತ್ತದೆ, ಆದರೆ ಬಹಳಷ್ಟು ಹಸ್ತಪ್ರತಿ ಪುರಾವೆಯು **ಗರುಡಪಕ್ಷಿ** (ἀετός, *aetos*) ಎಂಬ ಪದಕ್ಕೆ ಒಲವು ಹೊಂದಿರುತ್ತವೆ. ಈ *aetos* ಎಂಬ ಪದವನ್ನು "ಹದ್ದುಗಳು" ಎಂದು ಸಹ ಅನುವಾದಿಸಬಹುದಾಗಿದೆ (ಮತ್ತಾಯ 24:28; ಲೂಕ 17:37). ಗರುಡಪಕ್ಷಿ (ಅಥವಾ ಹದ್ದು) ಬಳಸಲ್ಪಟ್ಟಿರುವದಕ್ಕೆ ಕಾರಣವೇನೆಂದರೆ ಅದು ಬಲಿಷ್ಠ ರೆಕ್ಕೆಗಳನ್ನು ಹೊಂದಿದ್ದು **ಆಕಾಶಮಧ್ಯದಲ್ಲಿ** ಹಾರಾಡುವದಕ್ಕೆ ಶಕ್ತವಾಗಿರುತ್ತದೆ ಮತ್ತು ಅದು ಬೇಟೆಯಾಡುವ ಪಕ್ಷಿಯಾಗಿತ್ತು, ಮತ್ತು ಆ ಕಾರಣದಿಂದಾಗಿ ಅದು ಮೊದಲ ಶತಮಾನದಲ್ಲಿ

ಅಶುಭ ಸೂಚಕ ದೃಶ್ಯವಾಗಿರುತ್ತಿತ್ತು.

ಗರುಡಪಕ್ಷಿಯು **ಅಯ್ಯೋ, ಅಯ್ಯೋ, ಅಯ್ಯೋ, ಊದಬೇಕಾಗಿರುವ ಮೂವರು ದೇವದೂತರ ಮಿಕ್ಕಾದ ತುತೂರಿ ಧ್ವನಿಗಳು ಉಂಟಾಗುವಾಗ ಭೂನಿವಾಸಿಗಳಿಗೆ ಎಂಥಾ ವಿಪತ್ತುಗಳು ಸಂಭವಿಸುವವು ಎಂದು ಮಹಾ ಶಬ್ದದಿಂದ ಹೇಳುವದನ್ನು ಕೇಳಿದೆನು.** "ಆಂಗ್ಲದ 'ಅಯ್ಯೋ' ಮತ್ತು ಅದಕ್ಕೆ ಸಮವಾದ ಗ್ರೀಕ್ ಪದವು . . . ಒಂದು ಮಂಕು ಕವಿದ ಮತ್ತು ಶೋಕಭರಿತವಾಗಿ ಕಾಣಿಸಿಕೊಳ್ಳುತ್ತವೆ."[28] ಪ್ರಕಟನೆ ಪುಸ್ತಕದಲ್ಲಿ, **ಭೂನಿವಾಸಿಗಳು** ಎಂದರೆ ಕ್ರೈಸ್ತೇತರರು ಆಗಿದ್ದಾರೆ - ಅಂದರೆ, ಅವಿಶ್ವಾಸಿಗಳು, "ಭೂಸಂಬಂಧವಾದವುಗಳ" ಮೇಲೆಯೇ ಕೇಂದ್ರಿಕೃತವಾದ "ಮಮತೆಗಳನ್ನು" ಹೊಂದಿರುವವರು (ಕೊಲೊಸ್ಸೆ 3:2; KJV). ಮೂರು "ಅಯ್ಯೋಗಳು" ಕಡೇ ಮೂರು ತುತೂರಿಗಳನ್ನು ಸೂಚಿಸುತ್ತವೆ (ನೋಡಿರಿ 9:12; 11:14). ಮೊದಲಿನ ನಾಲ್ಕು ತುತೂರಿಗಳೇ ಅಷ್ಟೊಂದು ವಿನಾಶಕಾರಿಯಾಗಿದ್ದರೆ, ಅದಕ್ಕಿಂತಲೂ ಘೋರವಾದದ್ದು ಇನ್ನೂ ಮುಂದಕ್ಕೆ ಕಾದಿತ್ತು!

# ಅನ್ವಯಿಸುವಿಕೆ

## ದೇವಜನರ ಪ್ರಾರ್ಥನೆಗಳು (8:1-6)

Thomas Torranceನು ಬಳಸಿರುವ ಒಂದು ಪದಗುಚ್ಛವು 8:1-6ರ ಮೇಲಿನ ಪಾಠಕ್ಕೆ ಒಂದು ಉತ್ತಮ ಶಿರ್ಷಿಕೆಯಾಗುವದು: "ದೇವಜನರ ಪ್ರಾರ್ಥನೆಗಳು ಮತ್ತು ದೇವರ ಬೆಂಕಿ."[29] Earl Palmerನು ಒಂದು ಮನಸೆಳೆಯುವಂಥ ಶಿರ್ಷಿಕೆಯನ್ನು ಹೊಂದಿದ್ದನು: "ನಿಶ್ಯಬ್ದ ಮತ್ತು ಶಬ್ದ."[30] William Barclayನು "ನಿಶ್ಯಬ್ದ ಮತ್ತು ಪ್ರಾರ್ಥನೆಯ ಗುಡುಗು."[31]

## ಸಿದ್ಧತೆ ಮತ್ತು ಪ್ರಾರ್ಥನೆ (8:1-6)

ಸಿದ್ಧತೆಯನ್ನು ಮಾಡಿಕೊಳ್ಳುವದರ ಪ್ರಾಮುಖ್ಯತೆಯು ಪ್ರಕಟನೆ 8:1-6ರಲ್ಲಿ ಪ್ರಧಾನ ವಿಷಯವಾಗಿರುತ್ತದೆ. ದೇವರು ಏಳು ತುತೂರಿಗಳು ಊದಲ್ಪಡುವಿಕೆಗೋಸ್ಕರ ನಮ್ಮ ಮನಸ್ಸುಗಳನ್ನು ಸಿದ್ಧಗೊಳಿಸಲು ಈ ವಿಭಾಗವನ್ನು ಬಳಸಿಕೊಳ್ಳುತ್ತಾನೆ; ಅದೇ ರೀತಿಯಲ್ಲಿಯೇ, ನಾವು ಪ್ರತಿಯೊಂದು ಯೋಗ್ಯವಾದ ಕೆಲಸಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳುವ ಅಗತ್ಯವಿರುತ್ತದೆ.

ಪ್ರಾರ್ಥನೆಯ ಕುರಿತಾದ ಒಂದು ಬಲವಾದ ಸಂದೇಶವು ಸಹ ವಾಕ್ಯಭಾಗದಲ್ಲಿ ಅಡಕವಾಗಿರುತ್ತದೆ. ಕ್ರೈಸ್ತರು ಪ್ರಾರ್ಥಿಸುವಾಗ, ಪರಲೋಕವು ಕೇಳಿಸಿಕೊಳ್ಳುವದು ಮಾತ್ರವೇ ಅಲ್ಲ, ಪರಲೋಕವು ಸಂತೋಷಗೊಳ್ಳುವದು ಮಾತ್ರವೇ ಅಲ್ಲ, ಆದರೆ ಪರಲೋಕವು *ಪ್ರತ್ಯುತ್ತರ ಕೊಡುತ್ತದೆ.* ದೇವರು ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಯೇಸು ಹೀಗೆ ಹೇಳಿದನು, "ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು" (ಮತ್ತಾಯ 7:7). ಯಾಕೋಬನು ಹೀಗೆ ಬರೆದನು, "ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ" (ಯಾಕೋಬ 5:16). ಯೋಹಾನನು ಸರಳವಾಗಿ "ಏನೂ ಬೇಡಿಕೊಂಡರೂ ಆತನಿಂದ ಹೊಂದುವೆವು" ಎಂದಷ್ಟೆ ಹೇಳುತ್ತಾನೆ (1 ಯೋಹಾನ 3:22). ಆತನು ಇದನ್ನು ಸಹ ಹೇಳಿದನು,

> ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು

ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ (1 ಯೋಹಾನ 5:14, 15).

ಪ್ರಕಟನೆ 8:1-6 ವಾಕ್ಯಭಾಗವು ವಿವಿಧ ಲೇಖಕರಿಂದ ಈ ವ್ಯಾಖ್ಯೆಗಳು ಬರುವಂತೆ ಪ್ರಚೋದಿಸಿರುತ್ತದೆ:

[ಕ್ರಿಸ್ತನು] ದೇವರ ಆಳ್ವಿಕೆಯಲ್ಲಿ ನೇರವಾಗಿ ಭಾಗಿಯಾಗುವದಕ್ಕೆ [ಪ್ರಾರ್ಥನೆಯು] ಒಂದು ವಿಧವಾಗಿದೆ.[32]

ಭೂಮಿಯ ಮೇಲೆ ಅತ್ಯಂಥ ಶಕ್ತಿಶಾಲಿ ಪ್ರಭಾವ ಬೀರುವದು ಪ್ರಾರ್ಥನೆಯ ಪ್ರಭಾವವೇ ಆಗಿದೆ; ಮತ್ತು ಭೂಮಿಯ ಮೇಲೆ ಕ್ರಿಸ್ತನ ಪ್ರಾರ್ಥನೆಗಳೊಂದಿಗೆ ಒಂದಿಲ್ಲಾ ಒಂದು ಸಂಬಂಧವನ್ನು ನಿಭಾಯಿಸಿಕೊಳ್ಳದಿರುವ ಯಾವದೇ ಗಮನಾರ್ಹವಾದ ಘಟನೆಗಳು ಸಂಭವಿಸುವದಿಲ್ಲ, ಅವುಗಳ ಮನುಷ್ಯರಿಂದ ಗಮನಿಸಲ್ಪಡುವ ಅಥವಾ ಗಮನಿಸಲ್ಪಡದಿರುವ ಘಟನೆಗಳಾಗಿದ್ದರೂ ಸರಿಯೇ.[33]

[ಕೆಟ್ಟತನದೊಂದಿಗೆ ನಡೆಯುವ ಯುದ್ಧದಲ್ಲಿ] ಕ್ರಿಸ್ತನ ರಹಸ್ಯ ಆಯುಧವೆಂದರೆ [ಅದು] ನಂಬಿಕೆಯಿಂದ ಮಾಡಿದ ಪ್ರಾರ್ಥನೆಗೆ ಸಿಕ್ಕುವ ದೈವಿಕ ಪ್ರತ್ಯುತ್ತರವೇ.[34]

[ತೊಂದರೆಯು ಬರುವಾಗ] ಯಾವನೇ ಆಗಲಿ ಮಾಡಬಹುದಾದ ಅತ್ಯಂಥ ಕಾರ್ಯರೂಪದ ಸಂಗತಿಯೆಂದರೆ . . . ಪ್ರಾರ್ಥನೆಯೇ ಆಗಿದೆ.[35]

ಕೀರ್ತನೆಗಾರನಾದ ದಾವೀದನು ತನ್ನ ಹೃದಯವನ್ನು ದೇವರ ಮುಂದೆ ಬಿಚ್ಚಿಡುತ್ತಾನೆ:

ನನ್ನ ಕಡೆಗೆ ಲಕ್ಷ್ಯಕೊಟ್ಟು ಸದುತ್ತರವನ್ನು ದಯಪಾಲಿಸು. ಶತ್ರುಗಳ ಅಬ್ಬರ, ದುಷ್ಟರ ಹಿಂಸೆ ಇವುಗಳ ದೆಸೆಯಿಂದ ಪ್ರಲಾಪಿಸುವವನಾಗಿ ಹೊಯ್ದಾಡುತ್ತಾ ನರಳುತ್ತೇನೆ. ಅವರು ನನ್ನ ಮೇಲೆ ಅಪಾಯವನ್ನು ಬರಮಾಡಿ ಕೋಪದಿಂದ ನನ್ನನ್ನು ದ್ವೇಷಿಸುತ್ತಾರೆ. ನನ್ನ ಹೃದಯವು ನೊಂದು ಬೆಂದದೆ; ಮರಣಭಯವು ಆವರಿಸಿಕೊಂಡದೆ. ಅಂಜಿ ನಡುಗುತ್ತೇನೆ; ದಿಗಿಲು ನನ್ನನ್ನು ಹಿಡಿದದೆ. ಆಹಾ ನನಗೆ ರೆಕ್ಕೆಗಳಿದ್ದರೆ ಪಾರಿವಾಳದಂತೆ ಹಾರಿಹೋಗಿ ಆಶ್ರಯಸೇರಿಕೊಳ್ಳುತ್ತಿದ್ದೆನು (ಕೀರ್ತನೆ 55:2-6).

ನಿಮಗೆ ಎಂದಾದರೂ ದಾವೀದನ ಹಾಗೆ ಅನುಭವ ಆಗಿರುತ್ತದೋ, ಜೀವನದಿಂದ ಸಂಪೂರ್ಣವಾಗಿ ಬೆಂದು ಹೋಗಿರುವ ಅನುಭವ? ಕೀರ್ತನೆಗಾರನು ಮುಂದುವರೆದಂತೆ ತನ್ನ ನಂಬಿಕೆಯನ್ನು ಹೇಗೆ ವ್ಯಕ್ತಪಡಿಸಿದನೆಂಬುದನ್ನು ಕೇಳಿಸಿಕೊಳ್ಳಿರಿ: ". . . ನಾನಂತೂ ದೇವರಾದ ಯೆಹೋವನಿಗೆ ಮೊರೆಯಿಡುವೆನು; ಆತನು ನನ್ನನ್ನು ರಕ್ಷಿಸುವನು . . . ಆತನು ಹೇಗೂ ನನ್ನ ಮೊರೆಯನ್ನು ಕೇಳುವನು" (ಕೀರ್ತನೆ 55:16, 17). ಆತನು ಯಾವ ನಿರ್ಧಾರಕ್ಕೆ ಬಂದಿದ್ದನು? "ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು; ಆತನು ನಿನ್ನನ್ನು ಉದ್ಧಾರಮಾಡುವನು. ನೀತಿವಂತನನ್ನು ಎಂದಿಗೂ ಕದಲಗೊಡಿಸನು" (ಕೀರ್ತನೆ 55:22). ದಾವೀದನು ನನ್ನ ವಾಕ್ಯಭಾಗದ ಮೂಲಭೂತ ಸತ್ಯಗಳನ್ನು ಅರ್ಥಮಾಡಿಕೊಂಡಿದ್ದನು: ದೇವರ ಜನರು ಪ್ರಾರ್ಥಿಸುವಾಗ, ಪರಲೋಕವು ಆಲಿಸುತ್ತದೆ, ಪರಲೋಕವು ಸಂತೋಷಿಸುತ್ತದೆ, ಮತ್ತು ಪರಲೋಕವು ಪ್ರತ್ಯುತ್ತರ ಕೊಡುತ್ತದೆ.

ಈ ಮಹಾನ್ ಸತ್ಯಗಳನ್ನು ಅಂಗೀಕರಿಸಿಕೊಳ್ಳುವದು ನಮ್ಮ ಜೀವಿತಗಳ ಮೇಲೆ

ಪರಿಣಾಮವುಂಟು ಮಾಡುವದು. ಅದರ ಫಲಿತಗಳಲ್ಲೊಂದು ಎಂದರೆ ದೇವರೊಂದಿಗಿನ ನಮ್ಮ ಸಂಬಂಧವು ಸರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವದಕ್ಕಾಗಿ ನಮ್ಮ ಜೀವಿತಗಳನ್ನು ಪರೀಕ್ಷಿಸಿಕೊಳ್ಳುವೆವು. "ಯೆಹೋವನು ದುಷ್ಟರಿಗೆ ದೂರ, ಶಿಷ್ಟರ ಭಿನ್ನಹಕ್ಕೆ ಹತ್ತಿರ" (ಜ್ಞಾನೋಕ್ತಿ 15:29). ದೇವರನ್ನು ನೀವು "ತಂದೆ" ಎಂದು ಕರೆಯುವದಕ್ಕೆ ಮುಂಚೆ, ನೀವು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿರಬೇಕಾಗುತ್ತದೆ (ಯೋಹಾನ 3:3, 5); ನಿಮ್ಮ ಪಾಪಗಳು ಪರಿಹಾರವಾಗುವಂತೆ ನೀವು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 2:38).

## ಪರಲೋಕದಲ್ಲಿ ನಿಶ್ಶಬ್ದ (8:1)

ಅಪೊಸ್ತಲನಾದ ಯೋಹಾನನು ಹೀಗೆ ದಾಖಲಿಸುತ್ತಾನೆ, "ಆತನು [ಕುರಿಯಾದಾತನು] ಏಳನೆಯ ಮುದ್ರೆಯನ್ನು ಒಡೆದಾಗ ಸುಮಾರು ಅರ್ಧ ಗಂಟೇ ಹೊತ್ತಿನ ವರೆಗೂ ಪರಲೋಕವು ನಿಶ್ಶಬ್ದವಾಯಿತು" (ವ. 1). ಅನೇಕ ವರ್ಷಗಳ ಹಿಂದೆ, ಪ್ರವಾದಿಯಾದ ಹಬಕ್ಕೂಕನು ಹೀಗೆ ಬರೆದಿದ್ದನು, "ಯೆಹೋವನು ತನ್ನ ಪರಿಶುದ್ಧ ಮಂದಿರದಲ್ಲಿದ್ದಾನೆ; ಭೂಲೋಕವೆಲ್ಲಾ ಆತನ ಮುಂದೆ ಮೌನವಾಗಿರಲಿ" (ಹಬಕ್ಕೂಕ 2:20). ಪರಲೋಕದಲ್ಲಿ ಕಾಲಕಾಲಕ್ಕೆ ನಿಶ್ಶಬ್ದತೆಯ ಅಗತ್ಯವಿರುವದಾದರೆ, ಈ ಭೂಮಿಯ ಮೇಲೆ ಕೆಲವು ನಮಗೆ ನಿಶ್ಶಬ್ದದ ಅಗತ್ಯತೆಯು ಇನ್ನೆಷ್ಟು ಇರಬಹುದು! ನಾವು ಜೀವಿಸುವಂತ ಕಾಲಗಳು ಭೇಟಿಗಾಗಿ ಪೂರ್ವನಿಶ್ಚಯಗಳು ಹಾಗೂ ವೇಳಾಪಟ್ಟಿಗಳು ತುಂಬಿರುತ್ತವೆ. ನಾವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ದೌಡಾಯಿಸುತ್ತೇವೆ, ನಾವು ಕೇವಲ ಸ್ವಲ್ಪ ಯೋಚನೆಯನ್ನು ಮಾಡುವದಕ್ಕಾದರೂ ಒಂದು ಏಕಾಂತದ ಕ್ಷಣವನ್ನು ಕಳೆಯುವದು ಅತಿ ವಿರಳವಾಗಿರುತ್ತದೆ. *Windows Into the Future*, ಎಂಬ ಪುಸ್ತಕದಲ್ಲಿ Myer Pearlman ಪ್ರಶಾಂತವಾಗಿ ಧ್ಯಾನ ಮಾಡುವದಕ್ಕೆ ನಮಗೆ ಅಗತ್ಯವಿರುತ್ತದೆಂಬುದನ್ನು ಕಣ್ಣಿಗೆ ಕಟ್ಟಿದಂತೆ ದೃಷ್ಟಾಂತಪಡಿಸುತ್ತಾನೆ:

> ಇದು ಒಬ್ಬ ವಿದ್ಯಾವಂತ ಪ್ರಾಧ್ಯಾಪಕ ಹಾಗೂ ಒಬ್ಬ ಭಕ್ತಿವಂತ ಶಾಂತಿತತ್ವಗಳಲ್ಲಿ ನಿಷ್ಠೆಯುಳ್ಳವನ (Quaker) ಕುರಿತು ಹೇಳಿದ ಕಥೆಯಾಗಿರುತ್ತದೆ. ಪ್ರಾಧ್ಯಾಪಕನು ತನ್ನ ಸಮಯದಲ್ಲಿ ಒಂದು ನಿಮಿಷವಾದರೂ ವ್ಯರ್ಥವಾಗಿ ಹೋಗಬಾರದೆಂಬುದಕ್ಕಾಗಿ ದಿನದಲ್ಲಿ ಪ್ರತಿಯೊಂದು ತಾಸಿಗೊಮ್ಮೆ ಏನಾದರೊಂದು ಕಾರ್ಯವನ್ನು ಮಾಡುವದರಲ್ಲಿ ನಂಬಿಕೆಯಿಟ್ಟಿದ್ದನು. ಆತನು ಬಹಳ ಹೆಮ್ಮೆಯಿಂದ ತನ್ನ ವಿವರವಾದ ಕಾರ್ಯಗಳ ಪಟ್ಟಿಯನ್ನು ತನ್ನ ಮಿತ್ರನಿಗೆ ನೀಡಿದನು. ಬೆಳಗ್ಗಿನ ಉಪಹಾರ - ಎಂಟರಿಂದ ಒಂಭತ್ತು! ಪತ್ರ ವ್ಯವಹಾರ - ಒಂಭತ್ತರಿಂದ ಹತ್ತು! ಮನೋಶಾಸ್ತ್ರ - ಹತ್ತರಿಂದ ಹನ್ನೊಂದು ಹೀಗೆ ಮುಂತಾದ ಕಾರ್ಯಗಳನ್ನು ದಿನ ಪೂರ್ತಿ ಮಾಡುತ್ತಿದ್ದನು. ಆ ಶಾಂತಿ ತತ್ವಗಳಲ್ಲಿ ವಿಶ್ವಾಸಿಸುವವನು ಗಮನವಿಟ್ಟು ಕೇಳಿಸಿಕೊಂಡನು. . . .ಬಳಿಕ ಆತನು ತಿರುಗಿಕೊಂಡು ಹೀಗೆ ಹೇಳಿದನು: "ಮತ್ತು ಪ್ರಾರ್ಥನೆ, ಮಿತ್ರನೇ, ನೀನು ಯಾವಾಗ ಯೋಚಿಸುತ್ತಿ?" . . .
>
> Pennsylvania ವಿಶ್ವವಿದ್ಯಾಲಯದ ಮನೋಶಾಸ್ತ್ರಜ್ಞನಾದ Dr. Edward A. Streckerನು, ವೈದ್ಯಕೀಯ ಪರಿಷತ್ತಿನಲ್ಲಿ ಹೀಗೆ ಹೇಳಿದನು . . .
>
> "ಆಮೆಜೋನ್ ನದಿಯ ಮೇಲ್ದಂಡೆಗಳಲ್ಲಿ . . . ಸ್ವದೇಶಿ ಬುಡಕಟ್ಟು ಜನಾಂಗವೊಂದು ಇದ್ದು ತಮ್ಮ ರೂಢಿಯಾಗಿ ಬಂದಿರುವ ಚಟುವಟಿಕೆಗಳನ್ನು ಕಾಲಕಾಲಕ್ಕೆ ಮಧ್ಯದಲ್ಲಿ ನಿಲ್ಲಿಸಿ ಭೂಮಿಯ ಮೇಲೆ ಬೇರೆ ಬೇರೆ ಕಾಲಾವಧಿಗಳ ತನಕ ಅಂಟಿಕೊಂಡು ಕುಳಿತು ಬಿಡುತ್ತಾರೆ. ನಿಗದಿ ಪಡಿಸಲ್ಪಟ್ಟ ಸಮಯವು ಮುಗಿಯುವ ತನಕ ಅವರಿಗೆ ಎಷ್ಟೇ ಮನವೊಲಿಸಲು ಪ್ರಯತ್ನಿಸಿದರೂ ಸರಿಯೇ ಅಥವಾ ಬೆದರಿಕೆಯೊಡ್ಡಿದರೂ ಸರಿಯೇ, ಅವರು ಅಲ್ಲಿಂದ

ಕದಲುವದಿಲ್ಲ. ಅವರು 'ತಮ್ಮ ಆತ್ಮಗಳು ಅವರ ಹಳೇ ದೇಹಗಳ ವೇಗದೊಂದಿಗೆ ಹೋಗಿ ಕೂಡಿಕೊಳ್ಳಲಿ' ಎಂದು ಕಾಯುವವರಾಗಿದ್ದಾರೆ. ಆಧುನಿಕ ಮನುಷ್ಯನು ತನಗೆ ಲಾಭವನ್ನು ತಂದುಕೊಳ್ಳುವಂತೆ ಅದೇ ರೀತಿಯಲ್ಲಿ ಮಾಡಬಹುದಾಗಿದೆ."[36]

## ಏಳು ತುತೂರಿಗಳು (8:7-13)

ತುತೂರಿಗಳನ್ನು ಸಾರಾಂಶಗೊಳಿಸುವ ಒಂದು ರೇಖಾನಕ್ಷೆಯು ಈ ಕೆಳಗಡೆಯಲ್ಲಿ ಕಾಣಿಸುವದಾಗಿದೆ. ಮೊದಲನೆಯ ಅಂಕಣವು ಮೊದಲನೆಯ ಆರು ತುತೂರಿಗಳನ್ನು ಸಾರಾಂಶಗೊಳಿಸುತ್ತದೆ. ಎರಡನೆಯ ಅಂಕಣವು ಮೊದಲ ಆರು ತುತೂರಿಗಳ ಕುರಿತಾದ *ಒಂದು ಸಾಮಾನ್ಯವಾದ ಅನ್ವಯಿಸುವಿಕೆ*ಯುನ್ನು ಒದಗಿಸುತ್ತದೆ. ಮೂರನೆಯ ಅಂಕಣವು ತುತೂರಿಗಳು ಹೇಗೆ ರೋಮನ್ ಸಾಮ್ರಾಜ್ಯಕ್ಕೆ ಒಂದು ವಿಶೇಷ ಎಚ್ಚರಿಕೆಯಾಗಿದ್ದವೆಂಬುದನ್ನು ತೋರಿಸುತ್ತದೆ. ನಾಲ್ಕನೆಯ ಅಂಕಣವು ತುತೂರಿಗಳನ್ನು ಎಲ್ಲಾ ಕಡೆಗಳಲ್ಲಿರುವ ಜನರಿಗೆ ಅನ್ವಯಗೊಳಿಸುತ್ತದೆ. ನೀವು ಈ ನಕ್ಷೆಯ ಒಂದು ದೊಡ್ಡದಾದ ಪ್ರತಿಯನ್ನು ಮಾಡಿ ನೀವು ತುತೂರಿಗಳ ಕುರಿತು ಅಧ್ಯಯನ ಮಾಡುತ್ತಿರುವ ಎಲ್ಲಾ ಕಾಲ ತರಗತಿಯ ಮುಂದೆ ಇಟ್ಟುಕೊಳ್ಳಲಿಚ್ಛಿಸಬಹುದು. ಕಾಲ ಕಾಲಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಂಡು ಈ ನಕ್ಷೆಯನ್ನೊಮ್ಮೆ ಅವಲೋಕನ ಮಾಡುವದರಿಂದ ಬಹುಶಃ ಪ್ರಯೋಜನವಾಗುವದು.

**ತುತೂರಿಗಳು ಎಚ್ಚರಿಸುವದಕ್ಕಾಗಿ ಇರುತ್ತವೆ!**

| ಮೊದಲ ಆರು ತುತೂರಿಗಳು | ಪಾಪದ ಪರಿಣಾಮ | ರೋಮನ್ ಸಾಮ್ರಾಜ್ಯಕ್ಕೆ ಒಂದು ಎಚ್ಚರಿಕೆ | ಇವರಿಗೆ ಒಂದು ಎಚ್ಚರಿಕೆ ಎಲ್ಲಾ ಪಾಪಿಗಳಿಗೆ |
|---|---|---|---|
| ಒಂದರಿಂದ ನಾಲ್ಕರ ವರೆಗೆ: ಭೂಮಿಯ ಮೇಲೆ, ಸಮುದ್ರ, ಭೂಮಿಯ ನೀರುಗಳು, ಮತ್ತು ವಿಶ್ವದ ಮೇಲೆ ಪರಿಣಾಮ | ವಿಶ್ವದ ಮೇಲೆ ಪಾಪದ ಪರಿಣಾಮ (ಇಡೀ ವಿಶ್ವವು ಹದಗೆಟ್ಟು ಹೋಗುವದು) | ಪ್ರಾಕೃತಿಕ ವಿನಾಶತೆಗಳು | ಈ ಲೋಕವು ನಮ್ಮ ಮನೆಯಲ್ಲ! |
| ಐದನೆಯದು: ಯಾತನೆ ಕೊಡುವಂಥ - ಆದರೆ ಕೊಲ್ಲದ ಮಿಡತೆಗಳು | ವ್ಯಕ್ತಿಗತವಾಗಿ ಪಾಪದ ಪರಿಣಾಮ (ಆತ್ಮೀಕ ಹಾಗೂ ನೈತಿಕವಾಗಿ ಕೆಟ್ಟುಹೋಗುವಿಕೆ) | ಆಂತರೀಕ ಅವನತಿ | ಪಾಪಿಯ ಮಾರ್ಗವು ಕಠಿಣವಾದದ್ದು! |
| ಆರನೆಯದು: ನಾಶನ ಮಾಡುವಂಥ ದೇವದೂತರು/ಸೈನ್ಯ | ಬೇರೆಯವರ ಮೇಲೆ ಪಾಪದ ಪರಿಣಾಮ (ಯುದ್ಧದ ಘೋರಕೃತ್ಯಗಳಲ್ಲಿ ದೃಷ್ಟಾಂತಗೊಳ್ಳುವದು) | ಬಾಹ್ಯ ದಾಳಿಯಿಡುವಿಕೆ | ಪಾಪದ ಪರಿಣಾಮಗಳು ಭಯಂಕರ ಮತ್ತು ಬಹು ವ್ಯಾಪಕ! |

**ಏಳನೆಯ (ಕಡೇ) ತುತೂರಿಯು ಬಹಳ ತಡವಾಗಿ ಹೋಗುವದು! ಈಗಲೇ ಪಶ್ಚಾತ್ತಾಪ ಪಡಿರಿ!**

## ಮೊದಲ ನಾಲ್ಕು ತುತೂರಿಗಳು (8:7-12)

ಮೊದಲ ನಾಲ್ಕು ತುತೂರಿಗಳ ಕುರಿತಾದ ಮೊದಲನೆಯ ಪಾಠಕ್ಕೆ (ವಚನಗಳು 7-12) "ಪ್ರಕೃತಿಯು ವಿಫಲಗೊಳ್ಳುವಾಗ" ಎಂದು ಶಿರ್ಷೀಕೆಯನ್ನು ಕೊಡಬಹುದು. ಇನ್ನೊಂದು ಶಿರ್ಷೀಕೆಯು "ದೇವರ ತುತೂರಿಗಳು" ಎಂದಿರಬಹುದಾಗಿದೆ, ಅದು ಎಲ್ಲಾ ಏಳು ತುತೂರಿಗಳ ಕುರಿತ ಪಾಠಕ್ಕೂ ಬಳಸಲ್ಪಡಬಹುದಾಗಿದೆ. ಎಲ್ಲಾ ತುತೂರಿಗಳನ್ನು ಒಳಗೊಂಡಿರುವ ಬೇರೆ ಶಿರ್ಷೀಕೆಗಳೆಂದರೆ "ಭೂಮಿಯ ಮೇಲೆ ಬೆಂಕಿ" (Harold Hazelip) ಮತ್ತು "ಪಶ್ಚಾತ್ತಾಪ ಪಡದ ಮಾನವರ ದುರಂತ" (Edward McDowell).

## ದೇವರು ಮಾನವರನ್ನು ಪ್ರಾಕೃತಿಕ ವಿಕೋಪಗಳ ಮೂಲಕ ಎಚ್ಚರಿಸುತ್ತಾನೆ (8:7-12)

ಮೊದಲ ನಾಲ್ಕು ತುತೂರಿಗಳ ಸಾಂಕೇತಿಕತೆಯೊಳಗೆ ಆಳವಾದ ಅರ್ಥಗಳನ್ನು ಕಂಡುಕೊಳ್ಳುವದಕ್ಕೆ ವ್ಯಾಖ್ಯಾನಕಾರರು ಶೂರತನದಿಂದ ಪ್ರಯತ್ನಗಳನ್ನು ಮಾಡುತ್ತಾರೆ. ಅವರ ಕೆಲವೊಂದು ಕಂಡು ಹಿಡಿಯುವಿಕೆಗಳು ನ್ಯಾಯಯುತವಾಗಿರಬಲ್ಲವು - ಆದರೆ ಮೊದಲ ನಾಲ್ಕು ತುತೂರಿಗಳನ್ನು ಭೂಮಿ, ಸಮುದ್ರ, ಒರತೆಗಳು, ಹಾಗೂ ವಾತಾವರಣಗಳಿಗೆ ಸಂಬಂಧಿಸಿದ ಪ್ರಾಕೃತಿಕ ವಿನಾಶತೆಗಳೆಂದು ಯೋಚಿಸುವದು ಸುರಕ್ಷಿತವಾಗಿರುತ್ತದೆ. ಅಂಥ ವಿಕೋಪಗಳಲ್ಲಿ ಕಾಡ್ಗಿಚ್ಚುಗಳು, ಮರಳ ಬಿರಗಾಳಿಗಳು, ಸುಂಟರಗಾಳಿಗಳು, ಪ್ರವಾಹಗಳು, ಬರಗಳು, ಹಿಮ ಮತ್ತು ಮಂಜುಗಡ್ಡೆಯ ಬಿರುಗಾಳಿಗಳು, ಚಂಡಮಾರುತಗಳು, ಭೂಕುಸಿತಗಳು, ಭೂಕಂಪಗಳು, ಮತ್ತು ಜ್ವಾಲಾಮುಖಿಗಳ ಸ್ಫೋಟಗಳು ಇತ್ಯಾದಿ ಸೇರಿರುತ್ತವೆ.

ತುತೂರಿಗಳ ಪ್ರಾಥಮಿಕ ಉದ್ದೇಶವು ಮನುಷ್ಯರಿಗೆ ಎಚ್ಚರಿಕೆಯನ್ನು ಕೊಡುವದೇ ಆಗಿತ್ತದೆಂಬ ಯೋಚನೆಯ ಜೊತೆಯಲ್ಲಿ ಈ ವಿನಾಶತೆಗಳನ್ನು ಪರಿಗಣಿಸುವಾಗ, ಒಂದು ಆಘಾತಕರವಾದ ಮುಕ್ತಾಯಕ್ಕೆ ಬರಲಾಗುತ್ತದೆ: ಮನುಷ್ಯರನ್ನು ಪಶ್ಚಾತ್ತಾಪಕ್ಕೆ ನಡಿಸಲು ದೇವರು ಪ್ರಾಕೃತಿಕ ವಿಕೋಪಗಳನ್ನು ಬಳಸುತ್ತಾನೆ ಎಂಬದೆ.

ಬಹಳಷ್ಟು ಜನರು ಹವಾಮಾನದ ಕುರಿತು ಮಾತಾಡುತ್ತಾರೆ. ಅನೇಕರು ಹವಾಮಾನದ ಬಗ್ಗೆ ಗುಣುಗುಟ್ಟುತ್ತಾರೆ. ಒಂದಿಷ್ಟು ಜನರು ಅದನ್ನು ಮುಂತಿಳಿಸುವದಕ್ಕೆ ಪ್ರಯತ್ನಿಸುತ್ತಾರೆ. ಅನೇಕರು ಮಾಡುವದಕ್ಕೆ ವಿಫಲವಾಗುವದೇನೆಂದರೆ ಆ ಹವಾಮಾನದ ಮೂಲಕ *ಕಲಿತುಕೊಳ್ಳುವದು.* ಹವಾಮಾನವು ವಿಷಮಗೊಳ್ಳುವಾಗ, ದೇವರು ನಮಗೆ ಏನನ್ನೋ *ಕಲಿಸು*ವದಕ್ಕೆ ಪ್ರಯತ್ನಿಸುವವನಾಗಿದ್ದಾನೆ ಎಂಬುದಾಗಿ ನಮ್ಮ ವಾಕ್ಯಭಾಗವು ಘೋಷಿಸುತ್ತದೆ. ಉದಾಹರಣೆಗೆ, ಪಾಪದ ಬಹು ದೂರ-ವ್ಯಾಪಿಸುವ ಪರಿಣಾಮವನ್ನು ನಾವು ಅರ್ಥಮಾಡಿಕೊಳ್ಳಬೇಕೆಂದು ಆತನು ಬಯಸುವವನಾಗಿದ್ದಾನೆ. ಆದಾಮನು ಪಾಪ ಮಾಡಿದಾಗ, ದೇವರು ಆತನಿಗೆ ಹೀಗೆ ಹೇಳಿದನು, "ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು" (ಆದಿಕಾಂಡ 3:17). ಶಾಪವುಂಟು ಮಾಡುವಂಥ ಪಾಪದ ಪರಿಣಾಮಗಳು ಈಗಲೂ ಜಾರಿಯಲ್ಲಿರುತ್ತವೆ. ಈ ಅಧ್ಯಯನದಲ್ಲಿರುವ ಪ್ರಕೃತಿಯ ವಿಭಾಗಗಳು ನಮ್ಮ ಕೆಳಗಿರುವ ಭೂಮಿ, ನಮ್ಮ ಮೇಲಿರುವ ಆಕಾಶವು, ಮತ್ತು ನಮ್ಮ ಸುತ್ತಲಿನ ಸಂಗತಿಗಳು ಪಾಪದ ಕಲೆಗೊಳಪಟ್ಟಿವೆ ಎಂಬುದನ್ನು ಘೋಷಿಸುತ್ತವೆ. Haileyನು ಹೀಗೆ ಬರೆದನು, "ದೇವರು ಒಳ್ಳೇ ಭೂಮಿಯನ್ನು ಮನುಷ್ಯನ ಪ್ರಯೋಜನಕ್ಕಾಗಿ ಮತ್ತು ಉಪಯೋಗಕ್ಕಾಗಿ ಉಂಟು ಮಾಡಿದನು, ಮತ್ತು ಆತನ ಜೀವಿತದಿಂದ ಅದನ್ನು ಪೋಷಣೆ ಮಾಡಿದನು. ಆದರೆ ಮನುಷ್ಯನು ಭೂಮಿಯನ್ನು ದುರುಪಯೋಗ ಮಾಡಿಕೊಂಡಿರುತ್ತಾನೆ, ಮತ್ತು ಅದು ಈಗ ಪಾಪದ ಪರಿಣಾಮಕ್ಕೊಳಗಾಗಿದೆ; ಅದು ಭಾಗಶಃ ವ್ಯರ್ಥವಾಗಿ ಮಾರ್ಪಟ್ಟಿರುತ್ತದೆ ಮತ್ತು ಆತನ ವೈರಿಯಾಗಿರುತ್ತದೆ."[37] ಕೆಲವರು ಸಾಕ್ಷಿ ಹೇಳುವ ಪ್ರಕಾರ, ಪ್ರಕೃತಿಯು ಯಾವಾಗಲೂ ಜೀವದ ರಕ್ಷಣೆಗೆ ನಿಲ್ಲುವಂಥದ್ದಲ್ಲ; ಕೆಲವು ಸಾರಿ ಅದು ಜೀವದ ಸಂಹಾರಕವಾಗಿರುತ್ತದೆ. ಪಾಪವು ತಾನು ಸ್ಪರ್ಶಿಸುವ ಎಲ್ಲದರ ಮೇಲೆಯೂ ಪ್ರತಿಕೂಲ ಪರಿಣಾಮವನ್ನು ಬೀರುವಂಥದ್ದಾಗಿದೆ.

ಅಷ್ಟುಮಾತ್ರವಲ್ಲದೆ, ಈ ಲೋಕವು ನಮ್ಮ ಮನೆಯಾಗಿರುವದಿಲ್ಲ ಎಂಬುದಾಗಿ ದೇವರು ನಮಗೆ ಜ್ಞಾಪಿಸುವನು. ಸೂರ್ಯನು ಪ್ರಕಾಶಿಸುವ ವೇಳೆ, ಆಕಾಶವು ನೀಲಿಯಾಗಿರುತ್ತದೆ, ಮಂದವಾದ ಮಾರುತ ಬೀಸುತ್ತಿರುತ್ತವೆ, ಮತ್ತು ಪಕ್ಷಿಗಳು ಹಾಡುತ್ತಿರುತ್ತವೆ, ನಾವು ಈ ಭೂಗ್ರಹದಲ್ಲಿ ಸದಾಕಾಲವೂ ಉಳಿದು ಬಿಡಬೇಕೆಂದು ಬಯಸಬಹುದು. ಆ ಬಳಿಕ ಆಕಾಶವು

ಕತ್ತಲಾಗುತ್ತದೆ, ರಭಸವಾದ ಗಾಳಿಗಳು ಸುಯ್ಯೆಂದು ಬೀಸುತ್ತಿರುತ್ತವೆ, ಮತ್ತು ಗಾಳಿಯಲ್ಲಿ ಹಾರಾಡುವ ಭಗ್ನಾವಶೇಷಗಳು ಮತ್ತು ಮುರಿದ ದೇಹಗಳು ತುಂಬಿಕೊಂಡಿರುತ್ತವೆ - ಮತ್ತು ನಾವು ಕೇವಲ "ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು" (ಇಬ್ರಿಯ 11:13) ಜ್ಞಾಪಿಸಿಕೊಳ್ಳುತ್ತೇವೆ. ನಮ್ಮ ಹೃದಯಗಳು ಆಗ "ಕರ್ತನ ಬಳಿಯಲ್ಲಿರುವದೇ ಉತ್ತಮವೆಂದು" (2 ಕೊರಿಂಥ 5:8) ವೇದನೆಗೊಳ್ಳುತ್ತದೆ.

ಎಲ್ಲಕ್ಕಿಂತಲೂ ಮೇಲಾಗಿ, ನಮಗೆ ದೇವರೊಬ್ಬನೇ ಆಶ್ರಯವಾಗಿದ್ದಾನೆಂಬುದನ್ನು ನಾವು ಕಲಿತುಕೊಳ್ಳಬೇಕೆಂದು ಆತನು ಇಚ್ಛಿಸುತ್ತಾನೆ. ಜನರು ಕೆಲವು ಸಾರಿ ಜೀವಿತವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ ಎಂದು ಭಾವಿಸಿಕೊಳ್ಳುತ್ತೇವೆ, ಆದರೆ ಏಕಾಏಕ ದುರಂತವು ಸಂಭವಿಸುತ್ತದೆ ಮತ್ತು ನಮಗೆ ಸತ್ಯವು ಅರ್ಥವಾಗುತ್ತದೆ: ನಮ್ಮ ಜೀವಿತಗಳು ನಮ್ಮ ಹತೋಟಿಯಲ್ಲಿಲ್ಲ. ನಮ್ಮ ವಾಕ್ಯಭಾಗ ಹಾಗೂ ಇಂದಿನ ಸುದ್ದಿಪತ್ರಿಕೆಗಳ ತಲೆಬರಹಗಳು ಭೂಮಿಯ ಮೇಲಾಗಲಿ, ಸಮುದ್ರದಲ್ಲಾಗಲಿ, ಅಥವಾ ಆಕಾಶದಲ್ಲಾಗಲಿ ಸುರಕ್ಷತೆಯು ಇರುವದಿಲ್ಲ; ವಿಶ್ವದಲ್ಲಿ ಯಾವ ಸ್ಥಳದಲ್ಲಿಯಾದರೂ ಸರಿಯೇ ವಿನಾಶತೆಗಳು ಸಂಭವಿಸಬಲ್ಲವು ಎಂಬುದನ್ನು ಘೋಷಿಸುತ್ತವೆ. ಆದದರಿಂದ, "ಆಶ್ರಯದುರ್ಗ . . . ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು" (ಕೀರ್ತನೆ 46:1) ಆಗಿರುವವನ ಬಳಿಗೆ ಓಡಿ ಹೋಗುವದು ಆಜ್ಞಾರ್ಥಕವಾಗಿರುತ್ತದೆ.

ಸುದ್ದಿ ಪತ್ರಿಕೆಗಳು ವಿಶ್ವದಲ್ಲೆಲ್ಲಾ ಸಂಭವಿಸುವ ಪ್ರಾಕೃತಿಕ ವಿಕೋಪಗಳ ಕುರಿತು ಘೋಷಿಸುತ್ತವೆ; ಸುದ್ದಿಯ ಮ್ಯಾಗಜಿನ್‌ಗಳು ಅವುಗಳ ವಿವರಣೆಗಳನ್ನು ಕೊಡುತ್ತವೆ; ಟಿವಿಗಳು ಆ ವಿಕೋಪಗಳನ್ನು ಮತ್ತು ಅವುಗಳಿಂದಾದ ನಷ್ಟವನ್ನು ಕಣ್ಣಾರೆ ನೋಡುವಂತೆ ಅವಕಾಶವನ್ನು ಒದಗಿಸುತ್ತವೆ. ಹೇಗೂ, ಅವುಗಳಲ್ಲಿ ಯಾವವೂ ಮಾಡದಿರುವ ಕಾರ್ಯವು ಏನೆಂದರೆ, ನಮ್ಮ ಗಮನವನ್ನು ತನ್ನ ಕಡೆಗೆ ಸೆಳೆಯುವದಕ್ಕಾಗಿ ದೇವರು ಈ ವಿಕೋಪಗಳನ್ನು ಅನುಮತಿಸಿದ್ದಾನೆ ಎಂಬುದೆ.

ಅಪಾರ್ಥಮಾಡಿಕೊಳ್ಳಬೇಡಿರಿ. ರೋಮಾ 2:4 ಹೀಗೆ ಸಾರುತ್ತದೆ, "ಮನಸ್ಸನ್ನು ಬೇರೆಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆ." ದೇವರು ತನ್ನ ಪ್ರೀತಿಯನ್ನು ಸಾವಿರಾರು ವಿಧವಿಧವಾದ ದಾರಿಗಳಲ್ಲಿ ತೋರಿಸಿ ಕೊಟ್ಟಿರುತ್ತಾನೆ ಅದಕ್ಕೆ ಪರಾಕಾಷ್ಠೆಯಾಗಿ ತನ್ನ ಮಗನನ್ನು ಕಳುಹಿಸಿ ಕೊಟ್ಟನು (ಯೋಹಾನ 3:16) - ಮತ್ತು ಮನುಷ್ಯನು ಈ ಪ್ರೀತಿಯ ವ್ಯಕ್ತಪಡಿಸುವಿಕೆಗಳಿಗೆ ಪ್ರತಿಕ್ರಿಯೆಯನ್ನು ತೋರಿಸಬೇಕೆಂದು ದೇವರು ಇಷ್ಟಪಡುತ್ತಾನೆ. ಹೇಗೂ, ಜನರು ಈ ಕಳಕಳಿಯ ಕ್ರಿಯೆಗಳನ್ನು ಅಸಡ್ಡೆ ಮಾಡುವದಾದರೆ, ದೇವರು ಅವರನ್ನು ಕೈ ಬಿಟ್ಟು ಬಿಡುವದಿಲ್ಲ. ಬೇರೆ ಎಲ್ಲವೂ ವಿಫಲವಾದಾಗ, ಮನುಷ್ಯರನ್ನು ಅವರ ಆತ್ಮೀಕ ಮಂಕುತನದಿಂದ ಎಚ್ಚರಗೊಳಿಸುವದಕ್ಕೆ ತೊಂದರೆಯನ್ನು ಕಳುಹಿಸುತ್ತಾನೆ.

ನಮ್ಮಲ್ಲಿ ಬಹಳಷ್ಟು ತಂದೆತಾಯಿಗಳು ಮಾಡುವದಕ್ಕೆ ಪ್ರಯತ್ನಿಸುವ ಕಾರ್ಯಗಳನ್ನೇ ದೇವರು ಮಾಡುವದಕ್ಕೆ ಪ್ರಯತ್ನಿಸುತ್ತಿದ್ದಾನೆ: ನಮ್ಮ ಮಕ್ಕಳನ್ನು ಸರಿಯಾದ ಕಾರ್ಯ ಮಾಡುವಂತೆ ಪ್ರಭಾವಿತಗೊಳಿಸುವದಕ್ಕೆ ನಮಗೆ ಲಭ್ಯವಿರುವ ಸಕಲ ದಾರಿಗಳನ್ನೂ ಬಳಸುವದು. ನಾವು ನಮ್ಮ ಮಕ್ಕಳಿಗೆ ನಮ್ಮ ಪ್ರೀತಿಯನ್ನು ತೋರಿಸುವೆವು, ಮತ್ತು ಅದು ಅವರನ್ನು ಸರಿಯಾದ ದಾರಿಯಲ್ಲಿಡುವದೆಂದು ನಿರೀಕ್ಷಿಸುತ್ತೇವೆ. ಕೆಲವು ಸಾರಿ ಅದು ಕೆಲಸ ಮಾಡುವದಿಲ್ಲ; ಆದ್ದರಿಂದ ನಾವು ನಮ್ಮ ಮಕ್ಕಳಿಗೆ ತಪ್ಪು ಮಾಡುವದರಿಂದಾಗುವ ಪರಿಣಾಮಗಳ ಕುರಿತು ಎಚ್ಚರಿಸುತ್ತೇವೆ, ಅದೇ ರೀತಿಯಲ್ಲಿಯೇ ದೇವರು ತನ್ನ ವಾಕ್ಯದಲ್ಲಿ

ನಮ್ಮನ್ನು ಎಚ್ಚರಿಸುತ್ತಾನೆ. ಸಾಂದರ್ಭಿಕವಾಗಿ, ಹಾಗೆ ಮಾಡುವದು ಸಹ ಸಾಕಾಗುವದಿಲ್ಲ. ಆಗ ನಾವು ನಮ್ಮ ಮಕ್ಕಳನ್ನು ಶಿಕ್ಷಿಸಬೇಕಾಗುತ್ತದೆ - ಅವರನ್ನು ನಾವು ದ್ವೇಷಿಸುತ್ತೇವೆ ಎಂಬುದಕ್ಕಲ್ಲ, ಆದರೆ ಅವರನ್ನು ಪ್ರೀತಿಸುತ್ತೇವೆ ಮತ್ತು ಅವರು ಜವಾಬ್ದಾರಿಯುತ ನಾಗರಿಕರು ಹಾಗೂ ನಂಬಿಗಸ್ತ ಕ್ರೈಸ್ತರಾಗಿ ಬೆಳೆಯಬೇಕೆಂದು ಬಯಸುತ್ತೇವಾದ್ದರಿಂದ ಹಾಗೆ ಮಾಡುತ್ತೇವೆ. ಅದೇ ರೀತಿಯಲ್ಲಿಯೇ, "ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ" (ಇಬ್ರಿಯ 12:6). Michael Wilcockನು ಹೀಗೆ ವ್ಯಾಖ್ಯಾನಿಸುತ್ತಾನೆ: "ದೇವರು ಮನುಷ್ಯರಿಗೆ ಬುದ್ಧಿ ಬರುವಂತೆ ಮಾಡುವದಕ್ಕಾಗಿ ಒಂದು ಕಾಲದಲ್ಲಿ ಪರಿಪೂರ್ಣವಾಗಿದ್ದ ತನ್ನ ಸ್ವಂತ ಭೂಮಿಯನ್ನೂ ವಿನಾಶಕ್ಕೆ ಈಡು ಮಾಡುವ ಮೂಲಕ, ತನ್ನ ಶಕ್ತಿಯಲ್ಲಿರುವ ಸಕಲ ಪ್ರಯತ್ನಗಳನ್ನು ಮಾಡಿಲ್ಲ ಎಂಬುದಾಗಿ ಎಂದಿಗೂ ಹೇಳಲ್ಪಡದಿರಲಿ."[38]

ತುತೂರಿಗಳು ನಮಗೊಂದು ಪಾಠವನ್ನು ಹೊಂದಿವೆ. ತೊಂದರೆಯು ನಮ್ಮನ್ನು ನಮ್ಮ ಮೊಣಕಾಲುಗಳನ್ನೂರುವಂತೆ ಮಾಡುವಾಗ, ನಾವು ದೇವರು ಬಯಸುವ ಸ್ಥಿತಿಗೆ ಬಂದವರು ಆಗುತ್ತೇವೆ: ನಾವು "ದೇವರೇ, ಪಾಪಿಯಾದ ನನ್ನನ್ನು ಕರುಣಿಸು" ಎಂದು ಮೊರೆಯಿಡುವದಕ್ಕೆ ಪರಿಪೂರ್ಣವಾದ ಭಂಗಿಯಲ್ಲಿರುತ್ತೇವೆ (ಲೂಕ 18:13; KJV).

---

### ಅಡಿಟಿಪ್ಪಣಿಗಳು

[1]Frank Pack, *Revelation*, Part 1 (Austin, Tex.: R. B. Sweet Co., 1965), 73. [2]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 97–98. [3]Martin Kiddle, *The Revelation of St. John*, The Moffatt New Testament Commentary, ed. James Moffatt (New York: Harper & Brothers, Publishers, 1940), 128–29. [4]Ibid. [5]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 150 (ಒತ್ತಿ ಹೇಳಿದ್ದು ನನ್ನದು). [6]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 40. [7]Pack, 73. ಇದನ್ನು ಸಹ ನೋಡಿರಿ Eugene H. Peterson, *Reversed Thunder* (San Francisco: HarperCollins Publishers, 1988), 87. [8]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 179. See *Chagigah* 12b. [9]Peterson, 93. [10]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 40.

[11]Peterson, 94. [12]Mounce, 157. [13]Pack, 74. [14]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 118. [15]Peterson, 87. [16]Thomas F. Torrance, *The Apocalypse Today* (Grand Rapids, Mich.: Wm. B. Eerdmans Publishing Co., 1959), 60–61. [17]Homer Hailey, *Revelation* (Grand Rapids, Mich.: Baker Book House, 1979), 219. [18]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 124. [19]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 112–13. [20]ನೋಡಿರಿ Ray Summers, *Worthy Is the Lamb* (Nashville: Broadman Press, 1951), 155.

[21]Peterson, 98. [22]ಈ ಜ್ವಾಲಾಮುಖಿ ಸ್ಫೋಟದ ಒಂದು ಕಣ್ಣಿಗೆ ಕಟ್ಟಿದಂಥ ಬಣ್ಣನೆಗೆ, ನೋಡಿರಿ Summers, 156. [23]ಇವುಗಳ ಬಣ್ಣನೆಗಳಿಗಾಗಿ, ನೋಡಿರಿ Burton Coffman, *Commentary on Revelation* (Austin, Tex.: Firm Foundation Publishing House, 1979), 187. [24]Barclay, 43 (emphasis added). [25]C. S. Lewisನು ತನ್ನ ಪ್ರಸಿದ್ಧ *Screwtape Letters* ಸೈತಾನನ ಒಬ್ಬ ನುರಿತ ಸೇವಕನನ್ನು ಸೂಚಿಸುವದಕ್ಕೆ

"Wormwood" (ಮಾಚಿಪತ್ರೆ) ಎಂಬ ಇದೇ ಪದವನ್ನು ಬಳಸಿನು (New York: Macmillan Publishing Co., 1973). [26]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 113. [27]Morris, 120. [28]Mounce, 329. [29]Torrance, 61. [30]Earl Palmer*, 1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 185–86.

[31]Barclay, 39–41. [32]D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 64. [33]Coffman, 182. [34]Hailey, 214. [35]Peterson, 95. [36]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 80. [37]Hailey, 219. [38]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 95.